ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಶ್ರೀಮತಿ ಜಯಲಲಿತಾರವರು ಹಾಕಿರತಕ್ಕಂಥ ಕಂಡೀಷನ್‌ಗಳ ಬಗ್ಗೆ ಮಾನ್ಯ ವಾಜಪೇಯಿಯವರು ಸ್ಪಷ್ಟವಾಗಿ ಹೇಳಿದ್ದಾರೆ ಕಾವೇರಿ ವಿಚಾರದ ಬಗ್ಗೆ ಯಾವುದೇ ಕಾರಣಕ್ಕೂ ಕರ್ನಾಟಕ ರಾಜ್ಯದ ಹಿತವನ್ನು ಕಡೆಗಣಿಸತಕ್ಕಂಥ ಪ್ರಶ್ನೆ ಯಾವ ಸಂದರ್ಭದಲ್ಲೂ ಬರುವುದಿಲ್ಲ. ಇದರಲ್ಲಿ ಯಾರೂ ರಾಜಕೀಯ ಮಾಡತಕ್ಕಂಥ ಪ್ರಶ್ನೆ ಬರುವುದಿಲ್ಲ. ರಾಷ್ಟ್ರೀಯ ಜಲ ನೀತಿಯೇ ನಮ್ಮ ದೇಶದ ನೀರಿನ ಸಮಸ್ಯೆಯನ್ನು ಬಗೆಹರಿಸುತ್ತದೆ ಎನ್ನುವುದೇ ಬಿ.ಜೆ.ಪಿ., ಯ ರಾಷ್ಟ್ರೀಯ ಸಂವಿಧಾನದಲ್ಲೇ ನಾವು ಸ್ಪಷ್ಟ ಮಾಡಿಕೊಂಡಿದ್ದೇವೆ.

8. ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಾದ ನಿರ್ಣಯದ ಮೇಲಿನ ಚರ್ಚೆ:-

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- (ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಬಂದ ಮೇಲೆ ನಾಲ್ಕನೇ ಬಾರಿಗೆ ರಾಜ್ಯಾಪಾಲರ ಭಾಷಣವನ್ನು ಸದನಕ್ಕೆ ಕೊಟ್ಟಿದ್ದಾರೆ. ರಾಜ್ಯಪಾಲರ ಭಾಷಣ ಅಂಧರೆ; ಸರ್ಕಾರ ರಾಜ್ಯಕ್ಕಾಗಿ ಏನು ಕಾರ್ಯಕ್ರಮಗಳನ್ನು ಇಟ್ಟಿದೆ? ಯಾವ ಗುರಿಯಲ್ಲಿ ಸರ್ಕಾರ ರಾಜ್ಯಕ್ಕಾಗಿ ಏನು ಕಾರ್ಯಕ್ರಮದಲ್ಲಿರತಕ್ಕಂಥ ಸಮಸ್ಯೆಗಳೇನು? ಆ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬ ಬಗ್ಗೆ ಸರ್ಕಾರದ ಧೋರಣೆ ಹೇಳಿಕೆಯಾಗಿ ರಾಜ್ಯಪಾಲರ ಭಾಷಣ ಇರಬೇಕಾಗುತ್ತದೆಂದು ನಾವೆಲ್ಲರೂ ತಿಳಿದುಕೊಂಡಿರತಕ್ಕಂಥ ವಿಷಯ. ಆ ದಿಕ್ಕಿನಲ್ಲಿ ಇದನ್ನು ಆಲೋಚನೆ ಮಾಡಿದರೆ, ಈ ರಾಜ್ಯಪಾಲರ ಭಾಷಣದಲ್ಲಿರತಕ್ಕಂಥ ವಿಷಯವನ್ನು ಚುನಾವಣೆಗೆ ಮುಂಚಿತವಾಗಿ ಕರ್ನಾಟಕ ರಾಜ್ಯದ ಜನತೆಗೆ ಹೇಳಿದ್ದರೆ ಅವರ ಪಕ್ಷಕ್ಕೆ ಏನಾದರೂ ಪ್ರಯೋಜನವಾಗುತ್ತಿತ್ತೆಂದು ನಾನು ತಿಳಿದು ಕೊಂಡಿದ್ದೇನೆ. ಅಂದರೆ, ಹಿಂದೆ ನಾವು ಏನು ಮಾಡಿದ್ದೇವೆಂದು ಹೇಳಿದ್ದಾರೆಯೇ ಹೊರತು ಮುಂದೆ ನಾವು ಏನು ಮಾಡುತ್ತೇವೆ ಎನ್ನುವ ಬಗ್ಗೆ ಯಾವ ಪ್ರಸ್ತಾಪವೂ ಇದರಲ್ಲಿ ಇಲ್ಲ. ಆದುದರಿಂದ, ಮುಂದೆ ಬರತಕ್ಕಂಥ ದಿನಗಳಲ್ಲಿ ರಾಜ್ಯದ ಸಮಸ್ಯೆಗಳನ್ನು ಮತ್ತು ಜನರ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತದೆ ಎನ್ನುವ ಅಂಶವನ್ನು ಸರ್ಕಾರ ಸ್ಪಷ್ಟಪಡಿಸಬೇಕಾಗುತ್ತದೆ. ಈ ರಾಜ್ಯದಲ್ಲಿ ಬಡತನ, ನಿರುದ್ಯೋಗ, ಅನಕ್ಷರತೆ, ಕೃಷಿ ನೀರಾವರಿ, ಕೈಗಾರಿಕೆಗಳ ಸಮಸ್ಯೆ ವಿಪರೀತ ಇದೆ. ಈ ಸಮಸ್ಯೆಗಳನ್ನು ಯಾವ ರೀತಿ ಪರಿಹಾರ ಮಾಡಲಾಗುತ್ತದೆ ಎನ್ನುವ ಬಗ್ಗೆ ಸರ್ಕಾರ ಇದರಲ್ಲಿ ಹೇಳದೇ ಇರುವುದರಿಂದ ಮುಂದಿನ ಭವಿಷ್ಯದಲ್ಲಿ ಏನು ಗುರಿ ಎಂಬ ಬಗ್ಗೆ ಯಾವುದೇ ಸ್ಪಷ್ಟತೆ ಈ ಸರ್ಕಾರದಲ್ಲಿ ಇಲ್ಲ ಎನ್ನುವ ಅಭಿಪ್ರಾಯಕ್ಕೆ ನಾನು ಬರಬೇಕಾಗುತ್ತದೆ. ಈ ರಾಜ್ಯಪಾಲರ ಭಾಷಣವು, ಪ್ರತಿ ವರ್ಷ ಮಾಡತಕ್ಕಂಥ ಶ್ರಾದ್ಧದ ರೀತಿಯಲ್ಲಿ ಆಗುತ್ತಿದೆಯೋ ಏನೋ ಎಂದು ನನ್ನ ಅನುಮಾನ. ಈ ಭಾಷಣಕ್ಕೆ ಇರತಕ್ಕಂಥ ಪಾವಿತ್ರ್ಯತೆಯನ್ನು ಮರೆತು, ಶಾಸ್ತ್ರೋಕ್ತವಾಗಿ ಮಾಡಲೇ ಬೇಕಾದ ಶ್ರಾದ್ಧ ರೀತಿಯಲ್ಲಿ ಪ್ರತಿ ವರ್ಷ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಈ ಭಾಷಣದಲ್ಲಿ ಹೇಳಿರತಕ್ಕಂಥ ಅಂಶಗಳನ್ನು ನಾವು ಒಪ್ಪಿಕೊಳ್ಳಲಿಕ್ಕೂ ಆಗುವುದಿಲ್ಲ, ವಿರೋಧ ಮಾಡಲಿಕ್ಕೂ ಆಗುವುದಿಲ್ಲ. ಭಾಷಣದ ಪ್ರಾರಂಭದಲ್ಲಿ ಚುನಾವಣೆಗಳ ಬಗ್ಗೆ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ನನ್ನ ಅಭಿಪ್ರಾಯದ ಪ್ರಕಾರ ಈ ದೇಶದಲ್ಲಿರತಕ್ಕಂಥ ಎಲ್ಲಾ ರಾಜಕೀಯ ಪಕ್ಷಗಳು ಚುನಾವಣೆಯ ವ್ಯವಸ್ಥೆಯನ್ನೇ ಕೆಡಿಸಿಬಿಟ್ಟಿವೆ. ಇದು ಎಷ್ಟಮಟ್ಟಿಗೆ ಕೆಟ್ಟಿವೆ ಎಂದರೆ, ಲೋಕಸಭಾ ಚುನಾವಣೆ

ನಡೆಯತಕ್ಕಂಥ ಸಂದರ್ಭದಲ್ಲಿ ರಾಷ್ಟ್ರೀಯ ಸಮಸ್ಯೆಗಳನ್ನು ಜನತೆಯ ಮುಂದೆ ಇಡುವುದಿಲ್ಲ; ಅಸೆಂಬ್ಲಿ ಚುನಾವಣೆ ಸಂದರ್ಭದಲ್ಲಿ ರಾಜ್ಯದ ಸಮಸ್ಯೆಗಳನ್ನು ಜನತೆಯ ಮುಂದೆ ಇಡುವುದಿಲ್ಲ. ಜಿಲ್ಲಾ ಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ಜಿಲ್ಲಾ ಸಮಸ್ಯೆಗಳನ್ನು ಜನತೆಯ ಮುಂದೆ ಇಡುವುದಿಲ್ಲ. ಯಾವ ಚುನಾವಣೆಯಲ್ಲಿ, ಯಾವ ಸಮಸ್ಯೆಗಳನ್ನು ಜನತೆಯ ಮುಂದೆ ಇಡಬೇಕೆಂಬ ವಿಷಯವನ್ನು ಮರೆತಿರತಕ್ಕಂಥ ರಾಜಕೀಯ ಪಕ್ಷಗಳು, ಈ ದೇಶದ ಮತದಾರರನ್ನು ಯಾವ ಸ್ಥಿತಿಯಲ್ಲಿ ಇಟ್ಟಿದ್ದಾರೆ? ಲೋಕಸಭಾ ಚುನಾವಣೆಯಲ್ಲಿ ಮತ ಕೇಳಲಿಕ್ಕೆ ಹೋದರೆ, ನಮ್ಮ ಮನೆ ಮುಂದೆ ಇರತಕ್ಕಂಥ ಚರಂಡಿಯಲ್ಲಿ ನೀರು ಹೋಗದೇ ಇರುವುದರಿಂದ ನೀವು ಏನು ಮಾಡಿದ್ದೀರೆಂದು ಕೇಳುತ್ತಾರೆ; ಅಂದರೆ, ಸಾಮಾನ್ಯ ಮತದಾರರಿಗೆ, ಲೋಕಸಭಾ ಚುನಾವಣೆ ಬಂದಿದೆ, ಈ ದೇಶದಲ್ಲಿರತಕ್ಕಂಥ ಸಮಸ್ಯೆಗಳ ಆಧಾರದ ಮೇಲೆ ನಾನು ಮತ ಹಾಕಬೇಕೆಂಬ ಪ್ರಜ್ಞೆಯನ್ನು ಹುಟ್ಟಿ ಹಾಕುವುದರಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ವಿಫಲವಾಗಿರುವುದರಿಂದ ಸಾಮಾನ್ಯ ಮತದಾರರಲ್ಲಿ, ಲೋಕಸಭಾ ಚುನಾವಣೆ, ರಾಜ್ಯ ಶಾಸನ ಸಭಾ ಚುನಾವಣೆ, ಜಿಲ್ಲಾ ಪಂಚಾಯಿತಿ ಚುನಾವಣೆ ಮತ್ತು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ವ್ಯತ್ಯಾಸವೇ ಕಾಣುವುದಿಲ್ಲ. ಮತದಾರರು ಈ ಸ್ಥಿತಿಯಲ್ಲಿ ಇರುವಂಥ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಚುನಾವಣೆಗಳು ನಡೆದು ಇವತ್ತಿನ ದಿವಸ ಚುನಾವಣಾ ಫಲಿತಾಂಶ ಬಂದಿದೆ. ನಮಗೆ ಜನರ ತೀರ್ಪು ಬಂದಿದೆ, ಈ ದೇಶವನ್ನು ನಾವು ಆಳುತ್ತೇವೆ ಎಂದು ಹೇಳುವುದು ಈ ಸಂದರ್ಭದಲ್ಲಿ ಎಷ್ಟು ಸಮಂಜಸವೋ ಎಂದು ನನಗೆ ಅರ್ಥವಾಗುತ್ತಿಲ್ಲ. ಇನ್ನೊಂದು ದುರ್ದೈವದ ಸಂಗತಿ ಎಂದರೆ, ಲೋಕಸಭಾ ಚುನಾವಣೆ ನಡೆಯತಕ್ಕಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರದ ವಕ್ತಾರರು, ಈ ಲೋಕಸಭಾ ಚುನಾವಣೆ ಫಲಿತಾಂಶ, ನಮ್ಮ ಸರ್ಕಾರದ ಸಾಧನೆ ಮೇಲೆ ಎಂದು ಹೇಳಿದ್ದಾರೆ ಹಾಗಾದರೆ ಇವರು ಅಸೆಂಬ್ಲಿ ಚುನಾವಣೆ ನಡೆಸಬೇಕಾಗಿತ್ತು, ಇವರು ಏಕೆ ಲೋಕಸಭಾ ಚುನಾವಣೆಗೆ ಹೋದರು? ಅಂದರೆ, ಇವರಿಗೆ ರಾಜಕೀಯವಾದ ಜವಾಬ್ದಾರಿ ಮತ್ತು ರಾಜ್ಯವನ್ನು ಹೇಗೆ ನಡೆಸಬೇಕೆಂಬ ಪ್ರಜ್ಞೆ ಏನು ಇಲ್ಲವೆಂದು ಇದರಿಂದ ಗೊತ್ತಾಗುತ್ತದೆ ಲೋಕಸಭಾ ಚುನಾವಣೆ ಮುಗಿದು ಫಲಿತಾಂಶ ಬಂದ ಮೇಲೆ, ರಾಜ್ಯ ಸರ್ಕಾರ ರಾಜಿನಾಮೆ ಕೊಡಬೇಕೆಂದು ಕೆಲವರು ಕೇಳಿದರು. ಇನ್ನೊಬ್ಬರು, ನೀವು ಸರ್ಕಾರ ನಡೆಸುವುದಕ್ಕೆ, ನಿಮಗೆ ನೈತಿಕ ಹಕ್ಕು ಇಲ್ಲವೆಂದು ಹೇಳುತ್ತಾರೆ. ಈ ರೀತಿ ಕೇಳುವುದಕ್ಕೆ ಅವಕಾಶ ಮಾಡಿಕೊಟ್ಟಂಥವರು ಸರ್ಕಾರದವರೇ ಆಗಿದ್ದಾರೆ. ಲೋಕಸಭಾ ಚುನಾವಣಾ ಫಲಿತಾಂಶಕ್ಕೂ, ರಾಜ್ಯ ಸರ್ಕಾರಕ್ಕೂ ಏನಾದರೂ ಸಂಬಂಧ ಇದೆಯಾ? ನಾವು ಆ ರೀತಿ ಮಾತನಾಡಿದರೆ ಈ ದೇಶದ ರಾಜಕಾರಣ ಎಷ್ಟು ಕೆಳಮಟ್ಟಕ್ಕೆ ಹೋಗುತ್ತದೆಂದು ಆಲೋಚನೆ ಮಾಡತಕ್ಕಂಥ ಸ್ಥಿತಿಯಲ್ಲಿ ಇವತ್ತು ರಾಜಕೀಯ ಪಕ್ಷಗಳು ಇಲ್ಲ. ಹಾಗಾದರೆ ನಾನು ಇದರ ಬಗ್ಗೆ ಒಂದು ಪ್ರಶ್ನೆ ಕೇಳುತ್ತೇನೆ, 1984 ಲೋಕಸಭಾ ಚುನಾವಣೆಯಲ್ಲಿ, ಆಗ ಅಧಿಕಾರದಲ್ಲಿದ್ದಂಥ ಸರ್ಕಾರದ ಪರವಾಗಿ ಇಬ್ಬರೇ ಇಬ್ಬರು ಲೋಕಸಭಾ ಸದಸ್ಯರಾಗಿ ಗೆದ್ದರು. ಆಗ ಸರ್ಕಾರ ರಾಜಿನಾಮೆ ಕೊಟ್ಟಿತು. ಮತ್ತೆ 1983ರಲ್ಲಿ ಅಸೆಂಬ್ಲಿ ಚುನಾವಣೆ ಬಂತು, ಆಗ ಅದೇ ಪಕ್ಷಕ್ಕೆ 150 ರಷ್ಟು ಸಂಖ್ಯೆಯಲ್ಲಿ ಸದಸ್ಯರು ಗೆದ್ದರು. ಆಗ ಹಿಂದೆ ಗೆದ್ದಿದ್ದ ಲೋಕ ಸಭಾ ಸದಸ್ಯರು ರಾಜೀನಾಮೆ ಕೊಡಬೇಕೆಂದು ಯಾರೂ ಕೇಳಲಿಲ್ಲವಲ್ಲಾ? ಯಾವ ಆಧಾರದ ಮೇಲೆ ಈ ರಾಜಕಾರಣವನ್ನು ಮಾಡತಕ್ಕಂಥಾದ್ದು? ನಮ್ಮ ರಾಜಕೀಯ ತಪ್ಪು ಕಲ್ಪನೆಗಳಿಂದಾಗಿ, ಜನತೆಯನ್ನೂ ತಪ್ಪು ದಾರಿಗೆ

ಎಳೆದುಕೊಂಡು ಹೋಗತಕ್ಕಂಥ ಪ್ರಯತ್ನವನ್ನು ನಾವು ಈ ದೇಶದಲ್ಲಿ ಮಾಡಿದ್ದೇವೆ. ಅದರ ಪರಿಣಾಮವಾಗಿಯೇ, ಇವತ್ತು ಲೋಕ ಸಭಾ ಚುನಾವಣೆ ಸಂದರ್ಭದಲ್ಲಿ ಹಳ್ಳಿಗಳಿಗೆ ಹೋದರೆ, ನಮ್ಮ ಊರಿನಲ್ಲಿ ಲೈಟ್ ಇಲ್ಲವೆಂದು ಕೇಳುತ್ತಾರೆ. ನಮ್ಮ ಊರಿಗೆ ಲೈಟ್ ಹಾಕಿಸತಕ್ಕಂಥವರು ಯಾರು? ಪಡಿತರ ಚೀಟಿಯನ್ನು ಕೊಡತಕ್ಕಂಥವರು ಯಾರು? ಯಾವ ಚುನಾವಣೆಯಲ್ಲಿ ಏನು ಕೇಳಬೇಕೆಂಬ ವಿಷಯವನ್ನು ನಾವು ಜನರಿಗೆ ಹೇಳಿಕೊಟ್ಟಿಲ್ಲ. ಇವತ್ತು ಚುನಾವಣಾ ಅಕ್ರಮಗಳ ಬಗ್ಗೆ ಮಾತನಾಡುತ್ತಿದ್ದಾರೆ, ನಿಜ. ಚುನಾವಣೆಯಲ್ಲಿ ನಡೆಯತಕ್ಕಂಥ ಅಕ್ರಮಗಳ ಬಗ್ಗೆ ಮಾತನಾಡುತ್ತಿದ್ದಾರೆ, ನಿಜ. ಚುನಾವಣೆಯಲ್ಲಿ ನಡೆಯತಕ್ಕಂಥ ಅಕ್ರಮಗಳಿಗೆ ಯಾರನ್ನು ಹೊಣೆ ಮಾಡುತ್ತೀರಿ? ಇವತ್ತಿನ ಪ್ರಜಾಪ್ರಭುತ್ವದಲ್ಲಿ ಜನರ ತೀರ್ಪಿಗೆ ನಾವು ತಲೆಬಾಗಲೇಬೇಕು ಮತ್ತು ಗೌರವ ಕೊಡಬೇಕು, ಇದರಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯವಿಲ್ಲ. ಆದರೆ ಇವತ್ತು ಪ್ರಶ್ನೆ ಇರತಕ್ಕಂಥದ್ದು ಆ ಜನರ ತೀರ್ಪು ಯಾವ ವಿಧಾನದಲ್ಲಿ ಬರತಕ್ಕಂಥದ್ದು, ಹೇಗೆ ಬರತಕ್ಕದ್ದು, ಹೇಗೆ ಬರತಕ್ಕದ್ದು ಇದೆ ಎನ್ನುವ ಬಗ್ಗೆ ನಾವು ಯಾರಾದರೂ ಗಂಭೀರವಾಗಿ ಆಲೋಚನೆ ಮಾಡಿದ್ದೇವಾ? ಏಕೆಂದರೆ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ಬಹಳ ಪ್ರಮುಖವಾದ ಪಾತ್ರ ವಹಿಸಬೇಕಾಗುತ್ತದೆ. ಆ ರಾಜಕೀಯ ಪಕ್ಷಗಳು ನ್ಯಾಯಯುತವಾಗಿ ನಡೆದುಕೊಳ್ಳಬೇಕಾಗುತ್ತದೆ ಅಂತಹ ರಾಜಕೀಯ ಪಕ್ಷಗಳಿಗೆ ಪ್ರತಿನಿಧಿಗಳಾಗಿರತಕ್ಕಂಥ ನಾವುಗಳು, ಚುನಾವಣೆಯನ್ನು ನಡೆಸಿರತಕ್ಕಂಥ ವಿಧಾನ ಹೇಗೆ? ನಾವು ಇವತ್ತು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ ಈ ರೀತಿಯಲ್ಲಿ ಚುನಾವಣೆಗಳು ನಡೆಯುವುದಾದರೆ, ಈ ದೇಶದ ಪ್ರಜಾಪ್ರಭುತ್ವದ ಬಗ್ಗೆ ಅಪನಂಬಿಕೆ ಉಂಟಾಗತಕ್ಕಂಥ ಪರಿಸ್ಥಿತಿ, ಈ ದೇಶದಲ್ಲಿ ನಿರ್ಮಾಣವಾಗುತ್ತಿದೆ. ಪ್ರಜಾಪ್ರಭುತ್ವದ ಬಗ್ಗೆ ಅಪನಂಬಿಕೆ ಉಂಟಾದರೆ, ಈ ದೇಶ ಗಂಡಾಂತರ ಪರಿಸ್ಥಿತಿಗೆ ಬರುತ್ತದೆ. ಇವತ್ತು ಚುನಾವಣೆಗಳಲ್ಲಿ ಯಾವುದೇ ನೀತಿ ನಿಯಮಗಳು ಇಲ್ಲ. ಯಾವುದೇ ತತ್ವ ಇಲ್ಲ,ಯಾವುದೇ ಸಿದ್ಧಾಂತ ಇಲ್ಲ, ಎಲ್ಲವೂ ಕೂಡ ಅನುಕೂಲ ಸಿಂಧು, ಅಧಿಕಾರ ದಾಹದ ರಾಜಕಾರಣದ ಸೂತ್ರಗಳು ಅಷ್ಟೆ. ಈ ಆದೇಶದಲ್ಲಿ ಏನು ತತ್ವ ಉಳಿದಿಲ್ಲ. ಈ ಚುನಾವಣೆಗಳನ್ನು ನಾವು ಬಹಳ ಮುಕ್ತವಾಗಿ ನಡೆಸಿದ್ದೇವೆಂದು ಇದರಲ್ಲಿ ಹೇಳಿದ್ದಾರೆ. ಯಾವ ರೀತಿ ಮುಕ್ತವಾಗಿ ನಡೆದಿದೆ ಎಂಬುದು ಇಲ್ಲಿ ಕುಳಿತಿರತಕ್ಕಂಥ ನಮಗೆಲ್ಲರೀಗೂ ಗೊತ್ತಿದೆ, ಗೊತ್ತಿಲ್ಲದಿರತಕ್ಕಂಥ ಅಂಶ ಏನೂ ಇಲ್ಲ. ನಾವು ಯಾವುದೇ ರೀತಿಯ ಆಷಾಢಭೂತಿಯನ್ನು ತೋರಿಸತಕ್ಕಂಥ ಅವಶ್ಯಕತೆ ಇಲ್ಲ. ನಾವೆಲ್ಲರೂ ಚುನಾವಣೆಯಲ್ಲಿ ಭಾಗವಹಿಸಿದಂತಹವರು. ಎಂತಹ ಮುಕ್ತವಾದ ಚುನಾವಣೆ ನಡೆದಿದೆ ಎಂಬುದು ನಮಗೆ ಗೊತ್ತಿದೆ. ಈ ಚುನಾವಣೆಯಲ್ಲಿ ಎಷ್ಟು ಕೋಟಿಗಟ್ಟಲೆ ಹಣ ಹರಿದಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಮುಕ್ತ ಚುನಾವಣೆ ಎಂದರೆ ಏನು ಎಂಬುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಹಾಗಾದರೆ ಮುಕ್ತವಾದ ಚುನಾವಣೆ ಎಂದರೆ ಹೇಗೆ? ಮುಕ್ತವಾದ ಚುನಾವಣೆ ಎಂದು ಹೇಳಿದರೆ, ಮತದಾರರನ್ನು ಯಾವುದೇ ಆಸೆ ಆಮಿಷಗಳಿಗೆ ಗುರಿ ಪಡಿಸದೆ, ಅವನು, ನಿರ್ಭಯವಾಗಿ ಬಂದು ಮತ ಹಾಕಿದಾಗ ಮಾತ್ರ ಅದು ಮುಕ್ತ ಚುನಾವಣೆಯಾಗುತ್ತದೆ. ನಾವು ಹಾಗೆ ನಡೆದುಕೊಂಡಿದ್ದೇವಾ? ನಡೆದುಕೊಂಡಿರುವುದಕ್ಕೆ ಏನಾದರೂ ಪುರಾವೆಗಳು ಇವೆ ಎಂದು ಹೇಳಲು ಖಂಡಿತವಾಗಿ ಸಾಧ್ಯವಿಲ್ಲ. ಇದು ಹೆಚ್ಚಿಗೆ ಚರ್ಚೆ ಯಾಗಬೇಕಾದಂಥ ವಿಷಯ. ಏಕೆಂದರೆ, ಈ ದೇಶದಲ್ಲಿ ಮೂಲಭೂತ ಭಿನ್ನತೆಯಾಗಿರತಕ್ಕಂಥ, ಪ್ರಜಾಪ್ರಭುತ್ವದ ಅಳಿವು

ಉಳಿವಿನ ಪ್ರಶ್ನೆ. ಪ್ರಜಾಪ್ರಭುತ್ವದಲ್ಲಿ ಮತದಾರನೇ ಅಂತಿಮ ತೀರ್ಮಾನ ಕೊಡತಕ್ಕಂಥ ಒಬ್ಬ ಅಧಿಪತ್ಯ. ಅಂತಹ ಪರಿಸ್ಥಿತಿ, ವಾತಾವರಣ ನಿರ್ಮಾಣ ಮಾಡಿರತಕ್ಕಂಥ ನಾವುಗಳು ಜನರ ತೀರ್ಪು, ಜನರು ಕೊಡತಕ್ಕಂಥ ಅಧಿಕಾರ, ಎಂದು ಹೇಳಲಿಕ್ಕೆ ನಮಗೆ ನೈತಿಕವಾದಂಥ ಹಕ್ಕು ಉಂಟಾ ಎನ್ನುವಂಥ ಪ್ರಶ್ನೆ. ಇದರಲ್ಲಿ ಹೇಳಿರತಕ್ಕಂಥ ಮುಖ್ಯವಾದಂಥ ಎರಡು ಆಡಳಿತದ ಅಂಶಗಳನ್ನು ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಒಂದು ಕೈಗಾರೀಕರಣ ಮತ್ತು ಕೈಗಾರಿಕೆಗಳ ಬೆಳವಣಿಗೆಗಳ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಈ ಸರ್ಕಾರಕ್ಕೆ ಬಹುಶಃ ಗೊತ್ತಾಗಬೇಕು, ಬಹಳ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ದಿಟ್ಟ ಹೆಜ್ಜೆಗಳನ್ನು ಬಹುಪಾಲು ಕೇಂದ್ರ ಸರ್ಕಾರವೇ ತೆಗೆದುಕೊಳ್ಳುತ್ತಿದ್ದು, ಭಾರತವು ಉದಾರೀಕರಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಂದಿನಿಂದ ಕ್ರಮೇಣ, ಆ ಜವಾಬ್ದಾರಿ ರಾಜ್ಯಗಳ ಮೇಲೆ ಬೀಳುತ್ತಿದೆ. ನನ್ನ ಸರ್ಕಾರವು ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಅವಶ್ಯಕವಾಗಿರುವ ಬಂಡವಾಳಗಳನ್ನು ಆಕರ್ಷಿಸುವಲ್ಲಿ ಕರ್ನಾಟಕವು ಅಗ್ರಸ್ಥಾನದಲ್ಲಿದೆ ಎಂದು ನಿಮಗೆ ತಿಳಿಸಲು ನಾನು ಹರ್ಷಿತನಾಗಿದ್ದೇನೆ" ಎಂದು ಬಹಳ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಇದರಿಂದ ಬಹುಶಃ ಇವರು ಇದರ ಅಪಾಯವನ್ನು ಮನಗಂಡಿರುವುದಿಲ್ಲ. ಮಹಾರಾಷ್ಟ್ರ ಚುನಾವಣೆ ಫಲಿತಾಂಶ ನೋಡಿದರೆ" ಏನಾಯಿತೆಂದು ಗೊತ್ತಾಗುತ್ತದೆ. ಏಕೆಂದರೆ, ಮಹಾರಾಷ್ಟ್ರ ಇಡೀದೇಶದಲ್ಲಿ ಅತಿ ಹೆಚ್ಚಿನ ಉದಾರೀಕರಣ ನೀತಿಗಳನ್ನು ಮಾಡಿ, ವಿದೇಶಿ ಬಂಡವಾಳವನ್ನು ಆಕರ್ಷಿಸುವಂಥ ಒಂದು ರಾಜ್ಯ. ಆ ರಾಜ್ಯದಲ್ಲಿ ಜನರು ಏನು ತೀರ್ಪು ಕೊಟ್ಟಿದ್ದಾರೆ ಎಂದು ಹೇಳಬೇಕಾಗುತ್ತದೆ. ಇದು ಎರಡನೇ ಸ್ಥಾನದಲ್ಲಿ ಇದೆ. ಕರ್ನಾಟಕ ಇವತ್ತು ಇಡೀದೇಶದಲ್ಲಿ ವಿದೇಶಿ ಬಂಡವಾಳದ ಆಕರ್ಷಣೆಗೆ ಬೇಕಾಗಿರತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಿರತಕ್ಕಂಥ ಎಲ್ಲಾ ರಾಜ್ಯಗಳ ಪೈಕಿ ಎರಡನೇ ಸ್ಥಾನದಲ್ಲಿದೆ. ಆದರೂ ಇವರಿಗೆ ಬಂದಿರತಕ್ಕಂಥ ಹಣ ಎಷ್ಟು? ಇವರು ಹೇಳಿರತಕ್ಕಂಥ ಪ್ರಕಾರ ಕೇವಲ 5,400 ಕೋಟಿ ರೂಪಾಯಿಗಳು ಮಾತ್ರ 5,400 ಕೋಟಿ ರೂಪಾಯಿಗಳ ಆಕರ್ಷಣೆಯನ್ನು ಮಾಡಿರತಕ್ಕ ಕರ್ನಾಟಕ ರಾಜ್ಯ ಕೈಗಾರಿಕಾ ರಂಗದಲ್ಲಿ ಸಾಧಿಸಿರತಕ್ಕ ಪ್ರಗತಿ ಎಷ್ಟು ಎಂದರೆ, ಈ ಎರಡು ವರ್ಷದಲ್ಲಿ, ಇವರ ಉದ್ದೇಶ, ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲಾಗುತ್ತಿದೆ. ಅದು ಹಲವಾರು ಅಂಶಗಳಲ್ಲಿ ಒಂದು. ಇವರು ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರವೇ ಈ ಹೊಸ ಆರ್ಥಿಕ ಮತ್ತು ವಿದೇಶಿ ಬಂಡವಾಳವನ್ನು ಆಕರ್ಷಣೆ ಮಾಡುವಂಥ ಈ ಸಂದರ್ಭದಲ್ಲಿ ಕೆಲಸ ಸಿಕ್ಕಿರುವಂಥದ್ದು ಕೇವಲ 5,700 ಜನಕ್ಕೆ ಮಾತ್ರ. ಇಡೀ ರಾಜ್ಯದಲ್ಲಿ 5,700 ಜನರ ಲೆಕ್ಕ ಮಾತ್ರ ಕೊಟ್ಟಿದೆ. ಈ ಲೆಕ್ಕವು ಕೂಡ ಸರಿಯಲ್ಲ. ಅಷ್ಟು ಜನಕ್ಕೆ ಕೆಲಸ ಸಿಕ್ಕಿಲ್ಲ. ಆದರೂ ಕೂಡ ಇಲ್ಲಿ ಹೇಳಿದ್ದಾರೆ ಆದರೆ ನಮಗೆ ಇವತ್ತು ಸ್ಪಷ್ಟವಾಗಿ ಗೊತ್ತಾಗುತ್ತದೆ, ಹೊಸ ಆರ್ಥಿಕ ಧೋರಣೆಗಳ ಹಿನ್ನೆಲೆಯಲ್ಲಿ ವಿದೇಶಿ ಬಂಡವಾಳವನ್ನು ಆಕರ್ಷಣೆ ಮಾಡುವಂಥ ರಾಜ್ಯಗಳ ಪರಿಸ್ಥಿತಿ ಏನಾಗುತ್ತದೆ. ದೇಶಗಳ ಪರಿಸ್ಥಿತಿ ಏನಾಗುತ್ತಿದೆ ಹೋಗಲಿ ಹೊಸ ಆ ಆರ್ಥಿಕ ಧೋರಣೆಗಳನ್ನು ಅಳವಡಿಸಲಿಕ್ಕೆ ನಮ್ಮ ಮೇಲೆ ಒತ್ತಾಯ ಹೇರುವಂಥ ವಿಶ್ವಬ್ಯಾಂಕ್, ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಗೆ ಕೂಡ ಇವತ್ತು ನಂಬಿಕೆ ಉಳಿದಿಲ್ಲ. ಇವತ್ತು ಏನಾದರೂ ಆರ್ಥಿಕವಾದಂಥ ಒಂದು ಬೆಳವಣಿಗೆ

ಮಾಡುತ್ತೇವೆಂದು ಹೇಳಿ ಈಗ ಈಸ್ಟರ್ನ್ ಟೈಗರ್ಸ್ ಎಂದು ಹೇಳುವಂಥ ರಾಜ್ಯಗಳ ಪರಿಸ್ಥಿತಿ ಏನಾಗಿದೆ ನಮಗೆ ಗೊತ್ತಾಗಬೇಕು. ಜಕಾರ್ತದಲ್ಲಿ ಒಬ್ಬ ಆಟೋ ಡ್ರೈವರ್ ಹೇಳುತ್ತಾನೆ, ನಾನು 12 ಗಂಟೆಗಳ ಕಾಲ ಆಟೋ ಓಡಿಸಲು ತಯಾರಿದ್ದೇನೆ. ನಿಮ್ಮ ಸಂಬಳ ಬೇಡ, ನಿಮ್ ಹಣ ಬೇಡ, ನನಗೆ ಎರಡು ಕೇಜಿ ಅಕ್ಕಿ ಮಾತ್ರ ಕೊಡಿ ಎಂದು ಹೇಳುತ್ತಾನೆ. ಇದರಿಂದ ನಾವು ಪಾಠ ಕಲಿಯತಕ್ಕಂಥ ಅವಶ್ಯಕತೆ ಇಲ್ಲವಾ? ಹೊಸ ಆರ್ಥಿಕ ಧೋರಣೆಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಇವತ್ತು ಬಂಡವಾಳವನ್ನು ಆಕರ್ಷಣೆ ಮಾಡುತ್ತಿದ್ದಾರೆ. ಅದರ ಪರಿಣಾಮಗಳು ಏನಾಗುತ್ತವೆ, ಕರ್ನಾಟಕ ರಾಜ್ಯದಲ್ಲಿ ವಿದೇಶಿ ಕಂಪನಿಗಳು ಬಂದು, ಬಂಡವಾಳವನ್ನು ಹಾಕಿ ಈ ರಾಜ್ಯದ ಸಂಪತ್ತನ್ನು ಉಪಯೋಗಿಸಿಕೊಂಡು, ಈ ರಾಜ್ಯದಲ್ಲಿರತಕ್ಕಂಥ ನಿರುದ್ಯೋಗಿಗಳನ್ನು ದುರುಪಯೋಗಪಡಿಸಿಕೊಂಡು, ಇಡೀ ರಾಜ್ಯದ ಸಂಪತ್ತನ್ನು ಕೊಳ್ಳೆ ಹೊಡೆದುಕೊಂಡು ಹೋಗುತ್ತಿದ್ದಾರೆ. ಅದಕ್ಕೆ ಇವತ್ತು ಹಲವಾರು ಉದಾಹರಣೆಗಳನ್ನು ಬೇರೆ ಬೇರೆ ರಾಜ್ಯದಲ್ಲಿ ನಾವು ನೋಡುತ್ತಿದ್ದೇವೆ. ಇದರ ಅರ್ಥ ವಿದೇಶಿ ಬಂಡವಾಳವನ್ನು ನಮ್ಮ ರಾಜ್ಯದಲ್ಲಿ ಇಡಲೇಬೇಬಾರದೆಂದು ಎನ್ನತಕ್ಕಂಥ ವಾದವನ್ನು ನಾನು ಮಾಡುತ್ತಿಲ್ಲ. ಇವತ್ತು ರಾಜಕೀಯ ವ್ಯವಸ್ಥೆಯಲ್ಲಿ, ಜನತೆಯಲ್ಲಿ ಆಗತಕ್ಕಂಥ ಬದಲಾವಣೆಗಳ ಹಿನ್ನೆಲೆಯಲ್ಲಿ ನಮಗೆ ಯಾವುದೇ ದೇಶದ ಬಂಡವಾಳ ಬೇಡ ಎಂಬ ನಿರಾಕರಣೆಯೂ ಕೂಡ ಸರಿಯಿಲ್ಲ. ಆದರೆ ಆ ವಿದೇಶಿ ಬಂಡವಾಳ ಬರತಕ್ಕಂಥ ಸಂದರ್ಭದಲ್ಲಿ, ಯಾವ ಯಾವ ರಂಗದಲ್ಲಿ ಅವರನ್ನು ಸೀಮಿತಗೊಳಿಸಬೇಕು ಯಾವ ಯಾವ ಷರತ್ತುಗಳಿಗೆ ಅವರನ್ನು ಒಳಪಡಿಸಿ, ನಾವು ಇಲ್ಲಿ ಆ ಬಂಡವಾಳವನ್ನು ಹಾಕತಕ್ಕಂಥದ್ದಕ್ಕೆ ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಇಲ್ಲದೇ ಹೋದರೆ, ಎಲ್ಲಾ ವಲಯಗಳಲ್ಲಿ ವಿದೇಶಿ ಬಂಡವಾಳವನ್ನು ಆಕರ್ಷಣೆ ಮಾಡುವುದರಿಂದ, ಅವರಿಗೆ ಅವಕಾಶ ಮಾಡುವುದರಿಂದ ಇಡೀ ರಾಜ್ಯ ಮತ್ತು ನಮ್ಮ ದೇಶದ ಆರ್ಥಿಕ ವ್ಯವಸ್ಥೆ ಮೇಲೆ ದುಷ್ಪರಿಣಾಮವಾಗುತ್ತದೆ ಮತ್ತು ನಾವೂ ಕೂಡ ನಮ್ಮ ಇಡೀ ಸಂಪತ್ತನ್ನು ಲೂಟಿ ಹೊಡೆಯುವುದಕ್ಕೆ ಅವಕಾಶ ಮಾಡಿಕೊಡುವುದರ ಜೊತೆಗೆ ಯಾವುದೇ ಸ್ವತಂತ್ರ ಸಿಗುವುದಿಲ್ಲ. ಇವತ್ತು ನಮ್ಮ ರಾಜ್ಯದ ಪರಿಸ್ಥಿತಿಗೆ, ವಿದೇಶಿ ಬಂಡವಾಳ ಮಾಡತಕ್ಕಂಥ ಹಿನ್ನೆಲೆಯಲ್ಲಿ ಮತ್ತು ಅವರು ಹಾಕತಕ್ಕಂಥ ಎಲ್ಲ ಷರತ್ತುಗಳನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ, ಆದರೆ ನಮ್ಮದು ಏನೂ ಷರತ್ತು ಇಲ್ಲ. ಉದಾಹರಣೆಗೆ ಕೊಜೆಂಟ್ರಿಕ್ಸ್ ತೆಗೆದುಕೊಳ್ಳಿ, ದೇವನಹಳ್ಳಿಯಲ್ಲಿ ನೀವು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಕಟ್ಟುತ್ತೀರೆಂದು ಉದ್ದೇಶ ಇಟ್ಟಿದ್ದೀರಿ, ಅಲ್ಲಿ ಯಾರಿಗೆ ನೀವು ಬಂಡವಾಳವನ್ನು ಹಾಕುವುದಕ್ಕೆ ಹೇಳುತ್ತಿದ್ದೀರಿ, ನೀವು ಮಾಡಿಕೊಂಡಿರತಕ್ಕಂಥ ಒಪ್ಪಂದ ಏನು? ಇವತ್ತು ಬಿಲ್ಡ್ ಆಪರೇಟ್ ಟ್ರಾನ್ಸ್‌ಫರ್ ಇಲ್ಲ ಬಿಲ್ಡ್-ಆಪರೇಟ್ ಅಂಡ್ ಓನ್ ಇದನ್ನು ನೀವು ಒಪ್ಪಿಕೊಂಡಿಲ್ಲ. ಇದರ ಪರಿಣಾಮಗಳು ಏನಾಗುತ್ತವೆ ಇವತ್ತಿನ ದಿವಸ ನಾವು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಸರ್ಕಾರ ಎಲ್ಲಾ ವಿದೇಶಿ ಬಂಡವಾಳ ಬರಲಿ ಎಂದು ಬಾಗಿಲುಗಳನ್ನು ತೆಗೆಯುವುದರಿಂದ ನಮ್ಮ ರಾಜ್ಯದ ಪರಿಸ್ಥಿತಿ ಏನಾಗುತ್ತದೆ ಎನ್ನತಕ್ಕಂಥದ್ದನ್ನು ನಾವು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ ಇದೇ ಹಿನ್ನೆಲೆಯಲ್ಲಿ ನಾವು ಇವತ್ತು ಹೇಳಬೇಕಾಗುತ್ತದೆ. ಈ ದೇಶದಲ್ಲಿ ಎಲ್ಲಾ ಜನ ಇವತ್ತು ಸಾಕಷ್ಟು ಭ್ರಷ್ಟಾಚಾರದ ಮಾತನಾಡುತ್ತಿದ್ದಾರೆ. ರಾಜಕೀಯ ಪಕ್ಷಗಳು ಒಬ್ಬರ ಮೇಲೆ ಒಬ್ಬರು ಕೆಸರು ಎರಚಿಕೊಳ್ಳುತ್ತಿದ್ದೇವೆ. ಅವರ ಭ್ರಷ್ಟಾಚಾರ, ಇವರ

ಭ್ರಷ್ಟಾಚಾರ ಎಂದು ಆದರೆ, ಒಂದು ಸತ್ಯವನ್ನು ನಾವು ಇವತ್ತು ತಿಳಿದುಕೊಳ್ಳಬೇಕಾಗುತ್ತದೆ. ಈ ದೇಶದಲ್ಲಿ ಆರ್ಥಿಕ ಭ್ರಷ್ಟಾಚಾರ ರಾಜಕೀಯ ಪಕ್ಷಗಳಲ್ಲಿ ನುಗ್ಗಿರತಕ್ಕಂಥದ್ದು ಯಾವತ್ತಿನಿಂದ ಎಂಬುದನ್ನು ತಿಳಿಯಬೇಕಾಗುತ್ತದೆ. ಹೊಸ ಆರ್ಥಿಕ ಧೋರಣೆಗಳು ಹಿನ್ನೆಲೆಯಲ್ಲಿ ಇವತ್ತು ಇಡೀ ದೇಶದಲ್ಲಿ ಭ್ರಷ್ಟಾಚಾರ ಬರುತ್ತಿದೆ. ಸಾವಿರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಅಪಾದನೆಗಳನ್ನು ನಾವು ನಡೆಸುತ್ತಿದ್ದೇವೆ. ಏಕೆ ಗೊತ್ತಾ ಹೊಸ ಆರ್ಥಿಕ ಧೋರಣೆಗಳ ಹೆಸರಿನಲ್ಲಿ ವಿದೇಶಿ ಕಂಪನಿಗಳು ದೇಶದಲ್ಲಿ ಬಂಡವಾಳ ಹಾಕತಕ್ಕಂಥ ಈ ಸಂದರ್ಭದಲ್ಲಿ ಎಲ್ಲಾ ಕಂಪನಿಗಳು ಇಲ್ಲಿ ವ್ಯವಹಾರವನ್ನು ಮಾಡುತ್ತವೆ. ವ್ಯವಹಾರದಲ್ಲಿ ವ್ಯವಹಾರವನ್ನು ಕುದಿರಿಸಿಕೊಳ್ಳುವುದಕ್ಕೆ ಒಂದು ವ್ಯವಹಾರವನ್ನು ಮಾಡುತ್ತವೆ ಆ ಎಲ್ಲಾ ಕಂಪನಿಗಳಲ್ಲಿ ಆ ಆಡಳಿತ ಕಂಪನಿಗಳ ಬೈಲಾಗಳನ್ನು ತೆಗೆದು ನೋಡಬೇಕು ಎಲ್ಲಾ ಬೈಲಾಗಳಲ್ಲಿ ಹೇಳುತ್ತಾರೆ, ಆದರಲ್ಲಿ ಒಂದು ಕಾಲಂ ಇದೆ. There is a column in all the Multinational Companies. There is a political expenses column. What does it mean? What is the political expenses that they are going to do? ಅದರ ಪರಿಣಾಮ ಇವತ್ತು ಯೂರಿಯಾ ತಿಂದರು, ಸಕ್ಕರೆ ತಿಂದರು ಕೊನೆಗೆ ಹುಲ್ಲು ತಿಂದರು. ಏನಾಯಿತು? ಇವೋತ್ತು ಕರ್ನಾಟಕ ಸರಕಾರ ಕೊಜೆಂಟ್ರಿಕ್ಸ್ ಒಪ್ಪಂದದಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿ, ನಮ್ಮ ರಾಜ್ಯದ ಹೈಕೋರ್ಟ್ ತನಿಖೆಗೆ ಆಜ್ಞೆ ಮಾಡಿತು. ಆದರ ಸತ್ಯಾಸತ್ಯತೆಯ ಬಗ್ಗೆ ನಮಗೆ ಗೊತ್ತಿಲ್ಲ. ತೀರ್ಪಿನ ಬಗ್ಗೆಯೂ ನಾನು ಪ್ರಸ್ತಾಪ ಮಾಡುತ್ತಾ ಇಲ್ಲ. ಆದರೆ ನನಗಿರುವ ಗುಮಾನಿ ಅಂದರೆ, ಇದರಲ್ಲಿ ಏನೋ ಇದೆ ಎಂಬ ಗುಮಾನಿ ಬರುತ್ತಾ ಇದೆ. ಇಲ್ಲದಿದ್ದರೆ ನೀವು ಏಕೆ ಅಪೀಲ್ ಹೋಗಬೇಕಾಗಿತ್ತು? ವಿಚಾರಣೆ ಆಗಲಿ, ಸತ್ಯಾಂಶ ಹೊರಗೆ ಬರಲಿ. ಅಲ್ಲಿ ಏನಾಗಿದೆ ಎಂಬುದು ಗೊತ್ತಾಗಲಿ. ಅಪೀಲ್ ಹೋಗಿರುವಂಥಾದ್ದು ಏನು ಗುಮಾನಿ ತೋರಿಸುತ್ತದೆ ಅಂದರೆ, ನನಗೆ ಗೊತ್ತಿಲ್ಲ. I am not accusing anybody. ನೀವು ಅಪೀಲ್ ಹೋಗಿರತಕ್ಕಂಥ ಒಂದೇ ಒಂದು ವಿಷಯ ಇಡೀ ದೇಶದ ಜನತೆಯು ನಿಮ್ಮ ಬಗ್ಗೆ ಗುಮಾನಿ ಪಡುವುದಕ್ಕೆ ನೀವೇ ಅವಕಾಶ ಮಾಡಿಕೊಟ್ಟಿದ್ದೀರಿ. ನೀವೇ ಅಪೀಲ್ ಹೋಗಿದ್ದೀರಿ. ನಮಗೆ ಸತ್ಯಾಸತ್ಯತೆಗಳು ಗೊತ್ತಿಲ್ಲ. ಈ ದೇಶದಲ್ಲಿ ಎಲ್ಲರೂ ಭ್ರಷ್ಟರು, ಎಲ್ಲಾ ಸರಕಾರಗಳೂ ಭ್ರಷ್ಟರು. ಎಲ್ಲಾ ರಾಜಕೀಯ ಪಕ್ಷಗಳೂ ಭ್ರಷ್ಟರು. ಕತ್ತೆ, ಕುದುರೆ, ಎಲ್ಲರೂ ಒಂದೇ ಆಗಿ ಇಡೀ ರಾಜಕೀಯ ಪಕ್ಷಗಳ ಬಗ್ಗೆ ಮತ್ತು ರಾಜಕೀಯ ವ್ಯವಸ್ಥೆಗಳ ಬಗ್ಗೆ ಜನಸಾಮಾನ್ಯರು ಗುಮಾನಿ ಪಡತಕ್ಕಂಥ ಸ್ಥಿತಿಯನ್ನು ನಾವು ನಾವಾಗಿಯೇ ಈ ದೇಶದಲ್ಲಿ ನಿರ್ಮಾಣ ಮಾಡಿದ್ದೇವೆ. ಇದು ಕೂಡ ಹೊಸ ಆರ್ಥಿಕ ಧೋರಣೆಗಳ ಪ್ರತಿಫಲ. ವಿದೇಶಿ ಕಂಪನಿಗಳನ್ನು ಇಲ್ಲಿಗೆ ನೀವು ಆಹ್ವಾನ ಮಾಡುತ್ತಾ ಇರತಕ್ಕಂಥದ್ದರ ಪ್ರತಿಫಲ. ಕೊಜೆಂಟ್ರಿಕ್ಸ್ ಕರೆಂಟ್ ಉತ್ಪಾದನೆ ಮಾಡುತ್ತಾ ಇದೆ ಎಂದು ನೀವು ಹೇಳುತ್ತಾ ಇದ್ದೀರಿ. ಮೂರು ವರ್ಷಗಳಿಂದ ನೀವು ಸದನದಲ್ಲಿ ಇದೇ ಮಾತನ್ನು ಹೇಳುತ್ತಾ ಇದ್ದೀರಿ. ಆದರೆ ಅದು ಇದುವರೆಗೂ ಕಾರ್ಯಾರಂಭ ಮಾಡಿಲ್ಲ. ಒಂದೇ ಒಂದು ಯೂನಿಟ್ ಕರೆಂಟ್ ಕೂಡ ಉತ್ಪಾದನೆ ಮಾಡಿಲ್ಲ. ಆದರೂ ಕೂಡ ಮೂರು ವರ್ಷಗಳಿಂದ ಕೊಜೆಂಟ್ರಿಕ್ಸ್ ಬಗ್ಗೆ ಚರ್ಚೆಯಾಗುತ್ತಾ ಇದೆ. ಕೊಜೆಂಟ್ರಿಕ್ಸ್‌ನವರು ಸಾವಿರ ಮೆಗಾವ್ಯಾಟ್ ಕರೆಂಟ್ ಕೊಡುತ್ತಾರೆ ಎಂದು ಹೇಳುತ್ತಾ ಇದ್ದೀರೇ ಹೊರತು, ಒಂದೇ ಒಂದು ಮೆಗಾವ್ಯಾಟ್ ಕರೆಂಟ್ ಕೂಡ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗಿಲ್ಲ.

ಹಾಗಾಗದರೆ ಅದರ ಅರ್ಥ ಏನು? ಪ್ರತಿಯೊಂದು ಸಂದರ್ಭದಲ್ಲಿಯೂ ಇದೊಂದು ಚರ್ಚೆಯ ವಸ್ತುವಾಗಿದೆಯೇ ಹೊರತು ಕರ್ನಾಟಕ ರಾಜ್ಯಕ್ಕೆ ವಿದ್ಯುಚ್ಛಕ್ತಿಯ ಉತ್ಪಾದನೆಯಾಗಲಿಲ್ಲ. ಆ ಮೇಲೆ ಕರ್ನಾಟಕ ಪವರ್ ಕಾರ್ಪೋರೇಷನ್‌ರವರು ಈ ಸರಕಾರದವರ ಮುಂದೆ ಮನವಿ ಮಾಡಿಕೊಂಡರು. ನೀವು ನಮಗೆ ಏನು ಕೊಡಬೇಡಿ, ನಿಮಗೆ ಕೊಡಬೇಕಾದಂಥ ಸಾಲವನ್ನು ಕೊಟ್ಟುಬಿಡಿ, ನಾವು ಕಡಿಮೆ ದರದಲ್ಲಿ ಈ ರಾಜ್ಯಕ್ಕೆ ಬೇಕಾಗಿರತಕ್ಕಂಥ ವಿದ್ಯುತ್‌ನ್ನು ಅತೀ ಶೀಘ್ರದಲ್ಲಿ ನಾವೇ ಉತ್ಪದನೆ ಮಾಡಿಕೊಡುತ್ತೇವೆ ಎಂದು ಹೇಳಿ, ನೀವೇ ಸೃಷ್ಟಿ ಮಾಡಿರತಕ್ಕಂಥ ಕರ್ನಾಟಕ ಪವರ ಕಾರ್ಪೋರೇಷನ್‌ನವರು begged before you with the folded hands, but you did not care for that. ಇವತ್ತು ಪರಿಸ್ಥಿತಿಯು ಏನಾಯಿತು? ನಮ್ಮ ಕೆಪಿಸಿ ಯಲ್ಲಿ ಇಡೀ ದೇಶದಲ್ಲಿಯೇ ಅತ್ಯುತ್ತಮವಾದಂಥ ಟೆಕ್ನೋಕ್ರಾಟ್ಸ್ ಇದ್ದಾರೆ. ನಮ್ಮ ರಾಜ್ಯಕ್ಕೆ ಬೇಕಾಗಿರತಕ್ಕಂಥ ವಿದ್ಯುತ್‌ನ್ನು ಅತಿ ಕಡಿಮೆ ದರದಲ್ಲಿ, ಅತೀ ಕಡಿಮೆ ಕಾಲದಲ್ಲಿ ಉತ್ಪಾದನೆ ಮಾಡತಕ್ಕಂಥ ಶಕ್ತಿಯುಳ್ಳವರಿದ್ದರೂ ಕೂಡ ಅವರ ಮನವಿಯನ್ನು ತಿರಸ್ಕಾರ ಮಾಡಿ ಕೋಜೆಂಟ್ರಿಕ್ಸ್ ಜೊತೆಗೆ ಒಪ್ಪಂದ ಮಾಡಿಕೊಂಡು 1994ನೇ ಇಸವಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ್ದೀರಿ ಇವತ್ತು ನಾವು 1998ರಲ್ಲಿದ್ದೇವೆ. ಒಂದೇ ಒಂದು ಮೆಗಾವ್ಯಾಟ್ ವಿದ್ಯುತ್ ನಮ್ಮಲ್ಲಿ ಉತ್ಪಾದನೆಯಾಗಿಲ್ಲ. ಹಾಗಾಗದರೆ ಕರ್ನಾಟಕ ರಾಜ್ಯದ ಆರ್ಥಿಕ ಬೆಳವಣಿಗೆಯು ಹೇಗೆ? ನೀವು ಇದೇ ರೀತಿಯಲ್ಲಿ ಬಂಡವಾಳವನ್ನು ಹೂಡತಕ್ಕಂಥ ಕಂಪನಿಗಳನ್ನು ಇಲ್ಲಿಗೆ ಕರೆಯುತ್ತಾ ಇದ್ದೀರಿ. ನೀವೇ ಅವರಿಗೆ ಬೇಕಾಗಿರತಕ್ಕಂಥ ಎಲ್ಲಾ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಯಾವರೀತಿಯಾದಂಥ ಸೌಲಭ್ಯಗಳನ್ನು ನೀವಿಲ್ಲಿ ನಿರ್ಮಾಣ ಮಾಡಿದ್ದೀರಿ, ಯಾವರೀತಿಯಾದಂಥ ಬಂಡವಾಳವು ಇಲ್ಲಿದೆ ಬಂದಿದೆ, ಆ ಬಂಡವಾಳದ ಸ್ವರೂಪವೇನು? ಈ ಸದನವು ಪ್ರಾರಂಭವಾದ ದಿವಸ ಬೀದರ್‌ನಲ್ಲಿ ರೈತರುಗಳು ಆತ್ಮಹತ್ಯೆ ಬಗ್ಗೆ ಪ್ರಸ್ತಾಪವಾಯಿತು. ಈ ಸರಕಾರಕ್ಕೆ ಕನಿಷ್ಟ ಜವಾಬ್ದಾರಿಯಾದರೂ ಇರಬೇಕಾಗಿತ್ತು. ಅದರ ಸತ್ಯಾಸತ್ಯತೆ ಯಾವುದು ಇರಬಹುದು. ಯಾವ ಕಾರಣಕ್ಕೆ ಸತ್ತಿದ್ದಾರೆ, ಏನು ಇರಬಹುದು ಎಂಬ ಪ್ರಶ್ನೆ ಬೇರೆ. ಒಂದು ಜಿಲ್ಲೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅಲ್ಲಿ ಏನಾಗಿದೆ ಎಂದು ಹೋಗಿ ಸರಕಾರದ ಪರವಾಗಿ ಕನಿಷ್ಟಪಕ್ಷ ಒಬ್ಬ ಸಚಿವರೂ ಕೂಡ ಹೋಗಿ ನೋಡಲು ಆಗಲಿಲ್ಲ. ಈಗಲೂ ನಿಮಗೆ ಆ ಪರಿಸ್ಥಿತಿ ಏಕೆ ನಿರ್ಮಾಣವಾಗಿದೆ ಎಂದು ಗೊತ್ತಿಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ ಇಡೀ ಕೃಷಿರಂಗ ದಿವಾಳಿಯಾಗುತ್ತಾ ಇದೆ. ಇದು ಯಾಕೆ? ಹೊಸ ಆರ್ಥಿಕ ಧೋರಣೆಗಳ ಪ್ರತಿಫಲ. ನೀವು ವಿದೇಶಿ ಕಂಪನಿಗಳನ್ನು ಈ ದೇಶದ ಕೃಷಿ ರಂಗದಲ್ಲಿ ಹಸ್ತಕ್ಷೇಪ ಮಾಡಲು ಆಹ್ವಾನ ಮಾಡಿದ್ದೀರಿ. ಬೀಜೋತ್ಪಾದನೆಯಲ್ಲಿ ವಿದೇಶಿ ಕಂಪನಿಗಳ ಕೈವಾಡ ಎಷ್ಟರ ಮಟ್ಟಿಗೆ ಹೋಗಿದೆ ಅಂದರೆ ನಮ್ಮ ಕರ್ನಾಟಕ ರಾಜ್ಯದ ರೈತನೊಬ್ಬ ಏನು ಬೆಳೆಯ ಬೇಕು, ಏನು ಬೆಳೆಯ ಬಾರದು ಎಂಬುದನ್ನು ತೀರ್ಮಾನ ಮಾಡತಕ್ಕಂಥವರು ಮಲ್ಟಿನ್ಯಾಷನಲ್ ಕಂಪನಿಗಳವರು ಬಹುರಾಷ್ಟ್ರೀಯ ಕಂಪನಿಗಳು ಇದನ್ನು ತೀರ್ಮಾನ ಮಾಡುತ್ತಾ ಇವೆ. ಅವರು ಯಾವ ಬೀಜಗಳನ್ನು ಪತ್ಪಾದನೆ ಮಾಡುತ್ತಾ ಇದ್ದಾರೆ, ಕರ್ನಾಟಕ ರಾಜ್ಯದಲ್ಲಿ ಕಮರ್ಷಿಯಲ್ ಕ್ರಾಪ್‌ಗಳಿಗೆ ಬೇಕಾದಂಥ ಬೀಜಗಳನ್ನು ಉತ್ಪಾದನೆ ಮಾಡತಕ್ಕಂಥ ಕಂಪನಿಗಳು ಇವತ್ತು ತಯಾರಾಗಿವೆ. ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಹೇಳುತ್ತೀರಿ, ಆಹಾರ ಸಾಮಾಗ್ರಿಗಳ ಕೊರತೆ, ಇದೇ ವಿಚಾರದ ಬಗ್ಗೆ ಹಿಂದಿನ ರಾಜ್ಯಪಾಲರ

ಭಾಷಣದಲ್ಲಿ ಒಂದು ಅಂಶವನ್ನು ಹೇಳಿದ್ದೀರಿ. 1997-98ನೇ ಇಸವಿಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಒಟ್ಟು ಆಹಾರ ಸಾಮಗ್ರಿಗಳ ಉತ್ಪಾದನೆ 85ಲಕ್ಷ ಟನ್‌ಗಳು ಎಂದು- ಹೇಳಿದ್ದಾರೆ. ಅದೇ ವರದಿಯಲ್ಲಿ 2000 ಇಸವಿಯನ್ನು ಧಾಟಿದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಜನಸಂಖ್ಯೆಗೆ ಎರಡು ಹೊತ್ತು ಅನ್ನ ಕೊಡಬೇಕಾದರೆ 1,48,000 ಟನ್‌ಗಳಷ್ಟು ಆಹಾರೋತ್ಪಾದನೆಯಾಗಬೇಕು. ಇದಕ್ಕೆ ನೀವೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇದರ ಬದಲಾಗಿ ನೀವು ರಾಜ್ಯಪಾಲರ ಭಾಷಣದಲ್ಲಿ ಏನು ಹೇಳುತ್ತಾ ಇದ್ದೀರಿ, ಆಹಾರ ಸಾಮಗ್ರಿಗಳ ಉತ್ಪಾದನೆ ಕಡಿಮೆಯಾಗುತ್ತಾ ಇದೆ, ಏಕೆ? ಮಲ್ಟಿನ್ಯಾಷನಲ್ ಕಂಪನಿಗಳು ಇವತ್ತು ನಮ್ಮಲ್ಲಿ ಬಂದು ಕೃಷಿರಂಗದಲ್ಲಿ ಹಸ್ತಕ್ಷೇಪ ಮಾಡಿರತಕ್ಕಂಥ ಕಾರಣಕ್ಕೋಸ್ಕರವಾಗಿ, ಆ ಮಲ್ಟಿನ್ಯಾಷನಲ್ ಕಾರ್ಪೋರೇಷನ್ಸ್ ಕೇವಲ ಕಮರ್ಷಿಯಲ್ ಕ್ರಾಪ್ಸ್‌ಗೆ ಮಾತ್ರ ಉತ್ತೇಜನ ಕೊಡುತ್ತಾ ಇರುವುದರಿಂದ ಆಹರ ಸಾಮಗ್ರಿಗಳ ಉತ್ಪಾದನೆಯು ರಾಜ್ಯದಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಾ ಇದೆ. ಅದರ ಬದಲಿಗೆ ಇನ್ನೊಂದು ಸಮಸ್ಯೆಯು ಇವತ್ತು ಉದ್ಭವವಾಗಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ ರೈತರು, ಆಹಾರ ಸಾಮಗ್ರಿಗಳನ್ನು ಬೆಳೆದರೆ ತನಗೆ ಲಾಭ ಬರುವುದಿಲ್ಲ, ನಮಗೆ ಜೀವನ ಮಾಡಲು ಸಾಧ್ಯವಿಲ್ಲ, ಅದಕ್ಕಾಗಿ ನಾವು ಇವತ್ತು ಕಮರ್ಷಿಯಲ್ ಕ್ರಾಪ್ಸ್ ಮಾತ್ರ ಬೆಳೆಯ ಬೇಕೆನ್ನುವುದಕ್ಕೆ ಹೋಗಿ, ಬೀದರ್ ಜಿಲ್ಲೆಯಲ್ಲಿ ಅಂಥ ಒಂದು ದುರಂತವಾಯಿತು. ಹತ್ತಿ ಬೆಳೆಯುಲಿಕ್ಕೆ ಹೋದರು. ಹತ್ತಿ ನಷ್ಟವಾಯಿತು, ತೊಗರಿ ನಷ್ಟವಾಯಿತು, ಉದ್ದು ನಷ್ಟವಾಯಿತು, ಹೀಗಾಗಿ ರೈತರ ಸಾಲ ಜಾಸ್ತಿಯಾಗಿ ಅವರು ಬದುಕಲು ಕಷ್ಟವಾಯಿತು, ಸಾಲಗಾರರು ಮನೆಯ ಹತ್ತಿರ ಬಂದು ಪೀಡಿಸಿದರು, ಇಂಥ ಅವಮಾನವನ್ನು ತಾಳಲಾರದೆ ಇವತ್ತು ಅವರುಗಳು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿಯು ನಿರ್ಮಾಣವಾಯಿತು. ಇಂಥ ವಿಚಾರವನ್ನು ಸರಕಾರದವರು ಅಭ್ಯಾಸ ಮಾಡುತ್ತಾ ಇಲ್ಲ. ನೀವು ವಿದೇಶಿ ಕಂಪನಿಗಳಿಗೆ ಸಾರಾಸಗಟು ಬಾಗಿಲು ತೆರೆದು ಕೃಷಿ ರಂಗಕ್ಕೆ ಬನ್ನಿ ಎಂದು ಹೇಳಿದಿರಿ. ಇವತ್ತು ಕರ್ನಾಟಕ ರಾಜ್ಯದಲ್ಲಿ ಯಾವನೇ ಒಬ್ಬ ರೈತ, ನಾನು ವ್ಯವಸಾಯ ಮಾಡಿ ಜೀವನ ಮಾಡುತ್ತೇನೆಂದು ಧೈರ್ಯವಾಗಿ ಹೇಳಲು ಸಾಧ್ಯವಿಲ್ಲ ಅಂಥ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ. ಇವತ್ತು ಈ ವಿಚಾರ ಬೀದರ್ ಜಿಲ್ಲೆಯಿಂದ ಗುಲ್ಬರ್ಗ ಜಿಲ್ಲೆಗೆ ಹರಡುತ್ತಾ ಇದೆ. ಚಿಂಚೋಳಿ ತಾಲ್ಲೂಕಿನ ಕುಮಕುಂಟ ಎಂಬ ಗ್ರಾಮದಲ್ಲಿ ಒಂದು ಆತ್ಮಹತ್ಯೆ ಪ್ರಕರಣ ನಡೆದಿದೆ ಎಂದು ನಿನ್ನೆಯ ಪತ್ರಿಕೆಯಲ್ಲಿ ಬಂದಿದೆ. ಸತ್ಯಾಸತ್ಯತೆಗಳು ಬೇರೆ ಏನಾದರೂ ಇರಬಹುದು. ನಾವು ಈ ಸದನದಲ್ಲಿ ಬೀದರ್ ಜಿಲ್ಲೆಯ ಬಗ್ಗೆ ಮಾತನಾಡುವಾಗ ಏನು ಹೇಳಿದ್ದೇವೆ? ಮೂರೇ ಜನರು ಆ ರೀತಿಯಲ್ಲಿ ಸತ್ತಿರುವುದು ಎಂದು ಸರಕಾರದವರು ವರದಿ ಕೊಟ್ಟರು. ನಾನು ನಿನ್ನೆ ಬೀದರ್ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡು ಸತ್ತಂಥ ಹತ್ತು ಕುಟುಂಬಗಳ ಮನೆಗೆ ಭೇಟಿ ಕೊಟ್ಟು ಬಂದಿದ್ದೇನೆ. ನಾನು ಅದರ ವಿವರಗಳನ್ನೆಲ್ಲಾ ಹೇಳುವುದಿಲ್ಲ. ಆದರೆ ನನಗೆ ಗೊತ್ತಾಗಿರತಕ್ಕಂಥ ಒಂದು ಸತ್ಯಾಂಶ ಅಂದರೆ ಆ ಎಲ್ಲಾ ಹತ್ತು ಕುಟುಂಬಗಳವರು ಕೂಡ ಸಾಲಗಾರರ ಪಾಲಾಗಿದ್ದಾರೆ. ಅವರ ಬೆಳೆ ನಾಶವಾಗಿದೆ, ನಾನು ಅವರ ಹತ್ತಿರ ವಿಚಾರ ಮಾಡಿದೆ. ಕ್ರಿಮಿನಾಶಕಗಳನ್ನು ತೆಗೆದುಕೊಂಡು ಬಂದು ಒಂದೊಂದು ಬೆಳೆಗೆ ಐದಾರು ಸಲ ಹಾಕಿದರೂ ಕೂಡ ಬೆಳೆಯ ಮೇಲೆ ಏನೂ ಪರಿಣಾಮವಾಗುತ್ತಾ ಇಲ್ಲ. ಕಿರಮಿನಾಶಕ ಔಷಧಿಗಳು ಇವತ್ತು ಸಂಪೂರ್ಣವಾಗಿ ನಿಷ್ಫಲವಾಗಿವೆ. ಅವುಗಳು ಯಾವುದೇ ರೀತಿಯಾದ ಪರಿಣಾಮವನ್ನು

ಬೀರುತ್ತಾ ಇಲ್ಲ. ಹಾಗಾದರೆ ಈ ಪೆಸ್ಟಿಸೈಡ್ಸ್‌ನ್ನು ಉತ್ಪಾದನೆ ಮಾಡುತ್ತಾ ಇರತಕ್ಕಂಥವರು ಯಾರು? ಇವುಗಳನ್ನು ಉತ್ಪಾದನೆ ಮಾಡತಕ್ಕಂಥ ಅತಿ ಹೆಚ್ಚಿನ ಕಂಪನಿಗಳು ಮಲ್ಟಿನ್ಯಾಷನಲ್ ಕಾರ್ಪೋರೇಷನ್‌ಗಳು. ಇವರ ಉತ್ಪಾದನೆಗಳನ್ನು ಉಪಯೋಗಿಸಿದರೆ ಯಾವುದೇ ರೀತಿಯ ಪರಿಣಾಮವಾಗುತ್ತಾ ಇಲ್ಲ. ಹಾಗಾಗಿ ಬೆಳೆ ನಾಶವಾಗುತ್ತಾ ಇದೆ. ಉತ್ತರ ಕರ್ನಾಟಕ ಭಾಗದಲ್ಲಿ ನೀರಾವರಿಯು ಇನ್ನೂ ವ್ಯವಸ್ಥಿತವಾಗಿ ಆಗಿಲ್ಲ. ಸಾವಿರಾರು ಕೋಟಿ ರೂ.ಗಳನ್ನು ನೀರಾವರಿಗಾಗಿ ಹಾಕಿದ್ದೇವೆ ಆದರೆ ಎಷ್ಟು ಸಾವಿರ ಎಕರೆಗಳಿಗೆ ನಾವು ನೀರು ಪ್ರಾರಂಭವಾಗಿದೆ. ಆದರೂ ಕೂಡ ಇವೊತ್ತಿಗೂ 10 ಎಕರೆ ಭೂಮಿಗೆ ನೀರು ಕೊಡಲು ಸಾಧ್ಯವಾಗಿಲ್ಲ. ಹಾಗಾದರೆ ನೀರಾವರಿ ಯೋಜನೆಗಳ ಬಗ್ಗೆ ನಿಮ್ಮ ಧೋರಣೆಗಳೇನು? ಅವುಗಳು ಬರೀ ಕಾಗದಗಳಲ್ಲಿರ ಬೇಕೇ? ಸಾವಿರಾರು ಕೋಟಿ ರೂಪಾಯಿಗಳ ವಿದೇಶಿ ಸಾಲವನ್ನು ತಂದಿದ್ದೀರಿ. ವಿಶ್ವಬ್ಯಾಂಕ್‌ನಿಂದ ಸಾಲ ತಂದಿದ್ದೀರಿ. ಅದನ್ನೆಲ್ಲಾ ನೀರಾವರಿಗೆ ಹಾಕಿದ್ದೀರಿ. ಅದಕ್ಕೆ ಬಡ್ಡಿ ಕಟ್ಟ ಬೇಕಾಗಿದೆ. ಸಾಲವನ್ನು ತೀರಿಸ ಬೇಕಾಗಿದೆ. ಹೀಗೆ ಸಾವಿರಾರು ಕೋಟಿ ರೂ.ಪಾಯಿಗಳನ್ನು ಹಾಕಿದರೂ ಕರ್ನಾಟಕದಲ್ಲಿ ನೀರಾವರಿಯಾಗಿಲ್ಲ. ಅದರ ಪರಿಣಾಮ ರೈತರು ಬಲಿಯಾಗುತ್ತಿದ್ದಾರೆ. ಆದರೆ, ನಮ್ಮ ಸರಕಾರಕ್ಕೆ ನಾವು ವಿದೇಶೀ ಬಂಡವಾಳವನ್ನು ಆಕರ್ಷಿಸುವುದರಿಂದ ಈ ರಾಜ್ಯಕ್ಕೆ ಏನಾಗಿದೆ ಎನ್ನುವುದನ್ನು ಕೂಡ ಗಮನಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಅದು ಒಂದು ಕಡೆ ಇರಲಿ. ಇವತ್ತು ಇಲ್ಲಿ ಚರ್ಚೆ ಏನು ನಡೆಯುತ್ತಿದೆ ಎಂಬುದನ್ನು ಕೇಳುತ್ತಿಲ್ಲ. ಅವರವರ ಚರ್ಚೆಯಲ್ಲಿ ಅವರು ಮಗ್ನರಾಗಿದ್ದಾರೆ. ನಾನು ಇಲ್ಲಿ ಏನು ಹೇಳುತ್ತಿದ್ದೇನೆಂಬುದನ್ನು ಕೇಳುತ್ತಿಲ್ಲ. ಲೋಕಸಭಾ ಚುನಾವಣೆಯಾದ ನಂತರ ಕೂಡ ಈ ಜನರಿಗೆ ಪ್ರಜ್ಞೆ ಬಂದ ಹಾಗೆ ಇಲ್ಲ. ಆ ರೀತಿ ಪ್ರಜ್ಞೆ ಬಂದಿದ್ದರೆ, ಈ ರೀತಿ ಚರ್ಚೆ ಮಾಡುತ್ತಿರಲಿಲ್ಲ. ಸಂತೆಯ ರೀತಿ ಮಾಡಿಕೊಂಡಿದ್ದಾರೆ. ಲೋಕಸಭಾ ಚುನಾವಣೆಯ ನಂತರ ಕೂಡ ಇವರು ಪಾಠ ಕಲಿತ ಹಾಗೆ ಇಲ್ಲ. ಪ್ರಜಾಪ್ರಭುತ್ವದಲ್ಲಿ ಆಯ್ಕೆಯಾಗಿರತಕ್ಕಂತಹ ಸರಕಾರ, ಜನರ ಬಗ್ಗೆ ಏನು ಕಾಳಜಿಯನ್ನು ವಹಿಸುತ್ತಿದ್ದೀರಿ? ಅದರ ಬಗ್ಗೆ ನಿಮಗೆ ಪ್ರಜ್ಞೆ ಇಲ್ಲ. ಚುನಾವಣೆಯಲ್ಲಿ ಜನರು ತೀರ್ಪು ಕೊಟ್ಟಿದ್ದಾರೆ. ಆ ತೀರ್ಪು ಕೊಟ್ಟ ಮೇಲೆ ನಿಮ್ಮ ಸಚಿವ ಸಂಪುಟದಲ್ಲಿ ಈ ಭಾಷಣವನ್ನು ತಯಾರು ಮಾಡಿದ್ದೀರಿ. ನಿಮಗೇನಾದರೂ ರಾಜಕೀಯ ಪ್ರಜ್ಞೆ ಇದ್ದಿದ್ದರೆ, ಜನಸಾಮಾನ್ಯರ ಸಮಸ್ಯೆಯ ಬಗ್ಗೆ ಕಾಳಜಿ ಇದ್ದಿದ್ದರೆ, ಅವರ ಸಮಸ್ಯೆಗಳಲ್ಲಿ ಒಂದನ್ನಾದರೂ ಇದರಲ್ಲಿ ಹೇಳುತ್ತಿದ್ದಿರಿ. ನಾನು ಸರಕಾರಕ್ಕೆ ಸವಾಲನ್ನು ಹಾಕುತ್ತಿದ್ದೇನೆ. ಇದರಲ್ಲಿ ಒಂದು ಹೊಸ ಕಾರ್ಯಕ್ರಮವನ್ನು ಏನಾದರೂ ಹೇಳಿದ್ದೀರಾ? ನಾನು ಪ್ರಾರಂಭದಲ್ಲೇ ಹೇಳಿದ್ದೆ ನಿಮ್ಮನ್ನು ನಂಬಿದಂತಹ ಜನ 1994 ರಲ್ಲಿ ಕಾಂಗ್ರೆಸ್, ಬಿಜೆಪಿ ಯನ್ನು ಬಿಟ್ಟು ನಿಮಗೆ ಮತವನ್ನು ಹಾಕಿದರು ಲೋಕಸಭಾ ಚುನಾವಣೆಯಾದ ನಂತರ ಇದನ್ನು ನೀವು ತಯಾರು ಮಾಡಿದ್ದೀರಿ. ಜನರ ಸಮಸ್ಯೆಯಲ್ಲಿ ಒಂದನ್ನಾದರೂ ಇದರಲ್ಲಿ ಹೇಳಬೇಕಾಗಿತ್ತು ಚುನಾವಣೆಗೆ ಮೊದಲು ನೀವೇನಾದರೂ ಅಚ್ಚು ಹಾಕಿಸಿ, ಜನರಿಗೆ ಕೊಟ್ಟಿದ್ದೀದ್ದರೆ ಕನಿಷ್ಠ ಇನ್ನು ಒಂದೆರಡು ಸೀಟು ಬರುತ್ತಿತ್ತು ಅದನ್ನೂ ನೀವು ಮಾಡಲಿಲ್ಲ. ಈಗ ಅದು ಮಾಡಿದ್ದೇವೆ, ಇದು ಮಾಡಿದ್ದೇವೆಂದು ಇದರಲ್ಲಿ ಹಾಕಿದ್ದೀರಿ. What is your political sense, what is your political responsibility? you are totally indifferent people. ನಮಗೆ ಜನ ಏಕೆ ಅಧಿಕಾರ ಕೊಟ್ಟರು ಹೇಗೆ ಕೊಟ್ಟರು you have no sense of responsibility atleast, ಕಡೇ ಪಕ್ಷ ಈಗಲಾದರೂ ನೀವು ರಿಯಲೈಸೇಷನ್ ಮಾಡಬೇಕಾಗಿತ್ತು. ರಿಯಲೇಷನ್ ಮಾಡಿ ಇದರಲ್ಲಿ ಒಂದು ಕಾರ್ಯಕ್ರಮವನ್ನು ರೂಪಿಸಬೇಕಾಗಿತ್ತು.

ಶ್ರೀ ಎಸ್. ತಿಪ್ಪೆಸ್ವಾಮಿ:- ಅದು ಬಡ್ಜೆಟ್ಟಿನಲ್ಲಿ ಬರುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅದೂ ಇಲ್ಲ. You must be able to understand. This speech of Governor which is supposed to be the directions of the Government, the policy of the Government. Budget is different thing. you must know it ಪಬ್ಲಿಸಿಟಿ ತೆಗೆದುಕೊಳ್ಳತಕ್ಕಂತಹ ಶಕ್ತಿಯೂ ನಿಮಗೆ ಇಲ್ಲ. Budget is a different thing as a Minister you must know it.3 ವರ್ಷದಲ್ಲಿ ನಾವೇನು ಮಾಡಿದ್ದೇವೆಂದು ಜನಕ್ಕೆ ಹೇಳಿ ಅವರಿಂದ ಪಬ್ಲಿಸಿಟಿ ತೆಗೆದುಕೊಳ್ಳತಕ್ಕಂತ ಶಕ್ತಿ ಇಲ್ಲ. ಅಷ್ಟು ನಿಸ್ತೇಜರಾಗಿದ್ದೀರಿ. Atleast you have no such capacity, ನೀವು ಅದನ್ನೂ ನೋಡಲಿಲ್ಲವಲ್ಲಾ. you are totally failure in the political leadership. ಕನಿಷ್ಠ 3 ವರ್ಷಗಳಲ್ಲಿ ನಾವೇನು ಮಾಡಿದ್ದೇವೆಂದು ಜನಕ್ಕೆ ಹೇಳಿದ್ದಿದ್ದರೆ ಇನ್ನೊಂದೆರಡು ಸೀಟಾದರೂ ಬರುತ್ತಿತ್ತು. ನೀವು ಏನೂ ಹೇಳಲಿಲ್ಲ. ನೀವು ಚುನಾವಣೆಯಲ್ಲಿ ಏನು ಹೇಳಿದ್ದೀರಿ ಎಂದು ನನಗೆ ಗೊತ್ತು. ಇವತ್ತು ಕೈಗಾರಿಕೀಕರಣ, ಹೊಸ ಆರ್ಥಿಕ ಧೋರಣೆಗಳು ನಿಮಗೆ ಅವಕಾಶ ಕೊಟ್ಟಿಲ್ಲ. ಕೃಷಿ ರಂಗದಲ್ಲಿ ಏನಾಗಿದೆ ಎಂಬ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಕೃಷಿ ರಂಗದಲ್ಲಿ ರೈತರ ಸಮಸ್ಯೆಗಳು ಕೃಷಿ ಕಾರ್ಮಿಕರ ಸಮಸ್ಯೆ, ಭೂಮಿಯ ಸಮಸ್ಯೆ ಬೆಳೆಯ ಸಮಸ್ಯೆ, ನೀರಾವರಿ ಸಮಸ್ಯೆಗಳು ಕೃಷಿ ರಂಗದಲ್ಲಿ ಇರಬೇಕಾಗಿತ್ತು. ಆದರೆ ಇದನ್ನು ಎಲ್ಲಿಯಾದರೂ ಹೇಳಿದಾದರಾ ಕೇಳಿ. ಒಂದು ಕಡೆ ನಾವು ಇಷ್ಟಿಷ್ಟನ್ನು ಉತ್ಪಾದನೆ ಮಾಡುತ್ತೇವೆಂದು, ಇಷ್ಟಷ್ಟು ಬಂಡವಾಳ ಇದೆ ಎಂದು ಹೇಳಿದ್ದಾರೆ. ಇಷ್ಟು ಬಂಡವಾಳ ಇದೆ, ಏನಾಗಿದೆ ಎಂದು ಅಂಕಿ ಅಂಶಗಳನ್ನು ಲೆಕ್ಕ ಮಾಡಿ ನೋಡಿದರೆ ಇವರು ಕೊಟ್ಟಿರತಕ್ಕಂತಹ ಅಂಕಿ ಅಂಶಗಳಿಗೂ, ಈಗ ಆಗುತ್ತಿರತಕ್ಕಂತಾದ್ದಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ಕೈಗಾರಿಕೆಗಳ ಬಗ್ಗೆ ಹೇಳತಕ್ಕಂತಹ ಸಂದರ್ಭದಲ್ಲಿ, ಕಾರ್ಮಿಕರ ಬಗ್ಗೆ ನಿಮ್ಮ ಧೋರಣೆ ಏನು ಎಂದು ತಿಳಿಸಿಲ್ಲ. ಈ ರಾಜ್ಯದಲ್ಲಿ ಲಕ್ಷಾಂತರ ಜನ ಅಸಂಘಟಿತ ಕಾರ್ಮಿಕರಿದ್ದಾರೆ. ಅವರನ್ನು ರಕ್ಷಣೆ ಮಾಡತಕ್ಕಂತಹ ಕಾರ್ಯಕ್ರಮವೇನು ಇದೆ, ಯಾವ ರೀತಿಯಾದ ಕಾರ್ಯಕ್ರಮವನ್ನು ತಾವು ಹಾಕಿದ್ದೀರಿ ಎಂದು ತಿಳಿಸಬೇಕು. ಬೆಂಗಳೂರು ನಗರ ಒಂದರಲ್ಲೇ, ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂತಹ 30,000 ಜನ ಮಹಿಳೆಯರಿದ್ದಾರೆ. ಅವರಿಗೆ ಯಾವುದೇ ಕಾನೂನೂ ಅಪ್ಲೈ ಆಗುವುದಿಲ್ಲ. ಮಾಲೀಕ ತನ್ನ ಇಷ್ಟ ಬಂದ ರೀತಿಯಲ್ಲಿ ಅವರನ್ನು ದುಡಿಸಿಕೊಳ್ಳುತ್ತಾರೆ. ಅವರು ಮಹಿಳೆಯರು ಕೆಲಸ ಮಾಡುವುದಿಲ್ಲ ಹೋರಾಟ ಮಾಡಿದರೆ ಆ ಮಹಿಳೆಯರ ಮೇಲೆ ಗೂಂಡಾಗಳನ್ನು ಕಳುಹಿಸುತ್ತಾರೆ. 3 ವರ್ಷಗಳಿಂದ ಸತತವಾಗಿ ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂತಹ ಮಹಿಳೆಯರು ಹೋರಾಟ ಮಾಡುತ್ತಿದ್ದಾರೆ. ಸರಕಾರ ಇದರ ಕಡೆಗೆ ಕಣ್ಣು ತೆಗೆಯಲಿಕ್ಕಾಗಲಿಲ್ಲ. ಆ ಕಾರ್ಖಾನೆ ಮಾಲೀಕರಿಗೆ ಎಷ್ಟು ಕೊಬ್ಬು ಇದೆ ಎಂದರೆ, ಸರಕಾರದ ಮಂತ್ರಿಯೊಬ್ಬರಿಗೆ ಬೀಗದ ಕೈ ಬಿಸಾಕಿ ಸ್ವಾಮಿ, ನಾನು ಈ ರಾಜ್ಯದಲ್ಲಿ ಕಾರ್ಖಾನೆ ನಡೆಸುವುದಿಲ್ಲ, ನೀವು ನಡೆಸಿಕೊಳ್ಳಿ ಎಂದು ಹೇಳುತ್ತಾರೆ. ಈ ಕಾರ್ಖಾನೆಗಳ ಮಾಲಿಕರಿಗೆ ಅಷ್ಟು ಸೊಕ್ಕು ಇದೆ. ಅವರನ್ನು ಬಗ್ಗಿಸಲಿಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಾಗಲಿಲ್ಲ. ನಿಮ್ಮ ಕಾರ್ಮಿಕರ ಬಗ್ಗೆ ಧೋರಣೆ ಏನು ಇದೆ, ಅವರ ಲೇಬರ್ ಪಾಲಿಸಿ ಏನು ಇದೆ. ಇನ್ನೊಂದು ಕಡೆ ಕೃಷಿ ಕಾರ್ಮಿಕರ ಪರಿಸ್ಥಿತಿ

ಏನಾಗಿದೆ ಎಂದು ವಿಚಾರ ಮಾಡಬೇಕಾಗಿದೆ. ಅವರು ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿದ್ದಾರೆ. ಅವರಿಗೆ ಸಿಗತಕ್ಕಂತಹ ಕೂಲಿ ಏನು ಅವರಿಗೆ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಕೂಲಿಯಿಂದ ಬದುಕಲಿಕ್ಕೆ ಸಾಧ್ಯವಾಗುತ್ತಿಲ್ಲ. ಕೃಷಿ ರಂಗದಲ್ಲಿ ರೈತರು ಇನ್ನೊಂದು ಮುಖ್ಯವಾದ ವಿಭಾಗ ಈ ದೇಶದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳತಕ್ಕಂತಹ ಸ್ಥಿತಿಗೆ ಬಂದಿದ್ದಾರೆ. ಬರೀ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಆಂಧ್ರದಲ್ಲೂ ಕೂಡ ಇಂತಹ ಪ್ರಕರಣಗಳು ನಡೆಯುತ್ತಿವೆ. ಒಂದೇ ಕಡೆ ಎಂದು ನಾವು ಯಾರನ್ನೂ ಬೊಟ್ಟು ಮಾಡತಕ್ಕಂತಹ ಪರಿಸ್ಥಿತಿ ಇಲ್ಲ. ಇಡೀ ದೇಶದ ಕೃಷಿ ರಂಗವನ್ನು ದಿವಾಳಿ ಎಬ್ಬಿಸಿದಂತಹ ಜನ, ಕೃಷಿ ನೀತಿಯನ್ನು ಅಳವಡಿಸಲಿಕ್ಕೆ ಸಾಧ್ಯವಾಗದೇ ಐ ಎಂ ಎಫ್ ವಿಶ್ವಬ್ಯಾಂಕ್‌ನವರೇನು ಡಿಕ್ಟೇಟ್ ಮಾಡುತ್ತಾರೆ, ಆ ರೀತಿಯಲ್ಲಿ ಕೃಷಿ ರಂಗವನ್ನು ತೆಗೆದುಕೊಂಡು ಹೋಗಲಿಕ್ಕೆ ಪ್ರಯತ್ನ ಪಟ್ಟು, ಇಡೀ ಕೃಷಿ ರಂಗ ಇವತ್ತು ದಿವಾಳಿಯಾಗುವ ಪರಿಸ್ಥಿತಿ ಬಂದಿದೆ. ಆಹಾರ ಸಾಮಗ್ರಿಗಳ ಉತ್ಪಾದನೆಯಾಗಲಿಲ್ಲ. ಇಥಿಯೋಪಿಯಾದಲ್ಲಿ ಆದಂತಹ ಘಟನೆಗಳೇನು ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಆಹಾರ ಸಾಮಗ್ರಿಗಳ ಬೆಳವಣಿಗೆಯಿಲ್ಲದೆ ಅಲ್ಲಿ ಏನಾಯಿತು ಎಂದು ತಮಗೆಲ್ಲಾ ಗೊತ್ತಿದೆ. ಡೆಮಾಕ್ರೆಟಿಕ್ ರಿಪಬ್ಲಿಕ್ ಆಫ್ ಸೋಮಾಲಿಯಾದಲ್ಲಿ ಏನು ನಡೆಯುತ್ತಿದೆ. It is a civil war going on. There is no foodgrains. All foodgrains are air lifiting to Democratic Republic of Somalia because of the whole Somalia has been leased out to the American Multi National Companies for growing of sugragane. You have no policy. You are not able to understand what is the danger of Multi-National Corporations if they enter into agrarian sector.

ಅದರ ಪರಿಣಾಮ ರೈತರು ದಿವಾಳಿಯಾಗುತ್ತಿದ್ದಾರೆ. ಅದರ ಬಗ್ಗೆ ನಿಮ್ಮ ಹತ್ತಿರ ಕಾರ್ಯಕ್ರಮವೇನೂ ಇಲ್ಲ. ಆದರ ಜೊತೆಯಲ್ಲಿ ಅತಿ ಮುಖ್ಯವಾಗಿ ಕರ್ನಾಟಕದಲ್ಲಿ ವಿದ್ಯುತ್ ಸಮಸ್ಯೆ ಇದೆ. ಇದು ನಮ್ಮ ಎಲ್ಲಾ ಸ್ನೇಹಿತರಿಗೂ ಗೊತ್ತಿರಬೇಕು. ಹಿಂದೆ ಒಬ್ಬರು ಕೆ.ಇ.ಬಿ. ಅಧ್ಯಕ್ಷರಿದ್ದರು, ನಾನು ಅವರ ಹೆಸರನ್ನು ಹೇಳಲಿಕ್ಕೆ ಹೋಗುವುದಿಲ್ಲ. ಅಂತಹ ಅಧ್ಯಕ್ಷರುಗಳನ್ನು 3 ಜನ ಅಧಿಕಾರಿಗಳನ್ನು ಇಟ್ಟುಕೊಂಡರೆ ಯಾವುದೇ ಸರಕಾರವಿದ್ದರೂ ಮುಗಿಸಿಬಿಡುತ್ತಾರೆ. 3 ತಿಂಗಳಲ್ಲಿ ಆ ಸರಕಾರವನ್ನು ಜನರಿಂದ ದೂರ ಮಾಡಿ ಆ ಸರಕಾರವನ್ನು ಮುಳುಗಿಸಿ ಹೋಗುತ್ತಾರೆ. ಆ ಮಹಾನುಭಾವವನ್ನು ಈಗ ಎನ್.ಜಿ.ಎಫ್. ಗೆ ಹಾಕಿದ್ದಾರಂತೆ ಆ ಮಹಾನುಭಾವ ಅದನ್ನೇನು ಮಾಡುತ್ತಾನೆಂದು ಗೊತ್ತಿಲ್ಲ. ಅಂದರೆ ಇವತ್ತಿಗೂ ಕೂಡ ಇವರು ಪಾಠ ಕಲಿಯಲಿಲ್ಲ. ಬೀದರಿನಲ್ಲಿ ನಡೆದಂತಹ ಘಟನೆಗೆ ಸದನ ಸಮಿತಿ ಮಾಡಿ ಎಂದು ನಾವೆಲ್ಲರೂ ಒತ್ತಾಯ ಮಾಡಿದ್ದೆವು. ನಿಮಗೆ ನಮ್ಮ ಮೇಲೆ ನಂಬಿಕೆ ಇಲ್ಲ. ನಂಬಿಕೆ ಇಲ್ಲ. ಅಧಿಕಾರಿಗಳ ಮೇಲೆ ಹೆಚ್ಚು ನಂಬಿಕೆ ಇದೆ ನಿಮಗೆ ಜನರ ಮೇಲೆ ವಿಶ್ವಾಸ ಇಲ್ಲ. ನಾಳೆ ಅವರ ಹತ್ತಿರ ಹೇಗೆ ಹೋಗುತ್ತೀರಿ. ಇವತ್ತು ವಿದ್ಯುತ್ ಸಮಸ್ಯೆ ಏನಾಗಿದೆ ಎಂದರೆ ರಾಜ್ಯದಲ್ಲಿ ನೀವು ಎಲ್ಲಿಯಾದರೂ ಹೋಗಿ, 6 ಗಂಟೆ ಅಲ್ಲ 4 ಗಂಟೆ ಸತತವಾಗಿ ವಿದ್ಯುತ್ ಸಿಗುವುದಿಲ್ಲ. ಕೃಷಿ ರಂಗದಲ್ಲಿ ರೈತರು ಎಷ್ಟು ಹಿಂಸೆ ಅನುಭವಿಸುತ್ತಿದ್ದಾರೆಂದರೆ, ಅವರು ಹಾಕಿರತಕ್ಕಂತಹ ಬೆಳೆಗಳಿಗೆ ವಾರಕ್ಕೊಂದು ಸಲ ನೀರು ಕೊಡುವ ಸ್ಥಿತಿಯಲ್ಲಿ ಇಲ್ಲ.

ಪಂಪ್ ಸೆಟ್ ಆನ್ ಮಾಡಲು ಸರಿಯಾದಂತಹ ವಿದ್ಯುಚ್ಛಕ್ತಿ ಇಲ್ಲ. ಇದೇನು ಹೊಸದಾಗಿ ಈ ವರ್ಷ ಮಾತ್ರ ಉದ್ಭವವಾಗಿರತಕ್ಕಂತಹ ಸಮಸ್ಯೆ ಅಲ್ಲ. ಹಲವಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಕಳೆದ 2-3 ವರ್ಷಗಳಿಂದಲೂ ನಾವು ಇದನ್ನು ಅನುಭವಿಸುತ್ತಿದ್ದೇವೆ. ಅದಕ್ಕೆ ಏನು ಮಾಡಬೇಕು ಎಂಬ ಯೋಜನೆ ಇವರ ಹತ್ತಿರ ಇಲ್ಲ. ಇವತ್ತು ಜನರಿಗೆ ವಿದ್ಯುಚ್ಛಕ್ತಿ ಬಗ್ಗೆ ಸರಿಯಾದಂತಹ ಮಾಹಿತಿಯನ್ನು ಕೊಡುವಂತಹ ಸ್ಥಿತಿಯಲ್ಲಿ ಕೂಡ ಇವರಿಲ್ಲ. ಹೀಗಾಗಿ ಇವತ್ತು ರೈತರು ಹಾಗೂ ಸಾಮಾನ್ಯ ಜನರಿಗೆ ವಿದ್ಯುಚ್ಛಕ್ತಿ ವಿತರಣೆಯಲ್ಲಿ ಎಷ್ಟು ಅವ್ಯವಸ್ಥೆ ಆಗಿದೆ ಎಂಬುದನ್ನು ಹೇಳುವುದಕ್ಕೂ ಸಾಧ್ಯವಾಗುತ್ತಿಲ್ಲ. ಇದರಿಂದ ಎಷ್ಟು ಪರಿಣಾಮಗಳಾಗುತ್ತವೆ ಎಂದರೆ, ಒಂದು ಕಡೆ ಕೈಗಾರಿಕಾ ಉತ್ಪನ್ನ ಕಡಿಮೆಯಾಗುತ್ತದೆ. ಮತ್ತೊಂದು ಕಡೆ ಕೃಷಿ ಉತ್ಪನ್ನಗಳು ಕಡಿಮೆಯಾಗುತ್ತವೆ. ಆದರೆ ಇವರು ಅದಾವುದನ್ನೂ ಆಲೋಚನೆ ಮಾಡುವ ಸ್ಥಿತಿಯಲ್ಲಿಲ್ಲ. ಇನ್ನೊಂದು ಬಹಳ ಮುಖ್ಯವಾದ ಅಂಶವೆಂದರೆ, ಆರೋಗ್ಯದ ವಿಚಾರ. ಈ ಸದನದಲ್ಲಿ ಸತತವಾಗಿ ಡಾಕ್ಟರುಗಳ ಬಗ್ಗೆ, ಔಷಧಿಗಳ ಬಗ್ಗೆ, ಅವುಗಳ ಸ್ವಚ್ಛತೆಯ ಬಗ್ಗೆ, ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ ಆ ಬಗ್ಗೆ ಪ್ರತಿದಿನ ಚರ್ಚೆಯಾಗುತ್ತಿದೆ ಅದು ಯಾವುದೇ ಒಂದು ಸರ್ಕಾರ, ಸಾಮಾನ್ಯ ಮುಷ್ಯನಿಗೆ ಒದಗಿಸಬೇಕಾಗಿರುವಂತಹ ಕನಿಷ್ಠ ಸೌಲಭ್ಯ ಇದಾಗಿದೆ. ಆಸ್ಪತ್ರೆಗಳಿಗೆ ಬೇಕಾದಂತಹ ಜೀವ ರಕ್ಷಕ ಔಷಧಿಗಳನ್ನು ಒದಗಿಸುವುದು, ವೈದ್ಯರುಗಳನ್ನು ಒದಗಿಸುವುದು, ಚಿಕಿತ್ಸಾ ಸಾಮಗ್ರಿಗಳನ್ನು ಒದಗಿಸುವುದು ಹಾಗೂ ಮುಖ್ಯವಾಗಿ ಆಸ್ಪತ್ರೆಯನ್ನು ಸ್ವಚ್ಛವಾಗಿಡುವಂಥದ್ದನ್ನು ಜವಾಬ್ದಾರಿ ಸ್ಥಾನದಲ್ಲಿರುವಂತಹ ಯಾವುದೇ ನಾಗರೀಕ ಸರ್ಕಾರವೊಂದು ಮಾಡಬೇಕಾಗಿರುವಂತಹ ಕನಿಷ್ಠ ಕರ್ತವ್ಯವಾಗಿರುತ್ತದೆ. ಇವತ್ತು ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ ಏನಾಗಿದೆ? ಜೀವ ರಕ್ಷಕ ಔಷಧಿಗಳನ್ನು ಎಷ್ಟು ಪ್ರಮಾಣದಲ್ಲಿ ಆಸ್ಪತ್ರೆಗಳಿಗೆ ಕೊಡುತ್ತಿದ್ದೀರಿ ಎಂಬುದನ್ನು ನೀವು ನಿಮ್ಮ ಆತ್ಮಸಾಕ್ಷಿಯಾಗಿ ಎದೆ ಮುಟ್ಟಿಕೊಂಡು ಹೇಳಿ. ಹಳ್ಳಿಗಾಡಿನ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ತಕ್ಕ ನಿರೋಧಕ ಔಷಧಿ ಲಭ್ಯವಿಲ್ಲದಿರುವ ಬಗ್ಗೆ ಈ ಸದನದಲ್ಲಿ ಚರ್ಚೆಯಾಯಿತು. ಹಾವು ಕಡಿತದಿಂದ ಎಷ್ಟೋ ಜನ ಸತ್ತು ಹೋಗಿದ್ದಾರೆ. ಹಾವು ಕಡಿದರೆ ಮನುಷ್ಯ ಗಂಟೆಗಟ್ಟಲೆ ಬದುಕುವುದಿಲ್ಲ. ಹತ್ತಿರದಲ್ಲಿರುವ ಆಸ್ಪತ್ರೆಗೆ ಬರುವವರೆಗೆ ಅವನು ಉಳಿಯುವುದೇ ಕಷ್ಟ. ಇನ್ನು ದೂರದ ಆಸ್ಪತ್ರೆಗಳಿಗೆ ಹೋಗುವವರಿಗೆ ಅವನು ಜೀವಂತವಾಗಿರುವುದಿಲ್ಲ. ಯಾವ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ನಿರೋಧಕ ಔಷಧಿಯನ್ನು ಒದಗಿಸಿದ್ದಾರೆ ಎಂದು ಅವರು ಹೇಳಲಿ ಎಷ್ಟು ಆಸ್ಪತ್ರೆಗಳಿಗೆ ಅವರು ಹಾವು ಕಡಿತಕ್ಕೆ ನಿರೋಧಕ ಔಷಧಿ ಮತ್ತು ಜೀವ ರಕ್ಷಕ ಔಷಧಿಗಳನ್ನು ಒದಗಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ತಾವು ಬೇಕಾದರೆ ಎಲ್ಲಾ ಆಸ್ಪತ್ರೆಗಳನ್ನೂ ತನಿಖೆ ಮಾಡಿಸಿ. ಸಾಮಾನ್ಯ ಮನುಷ್ಯ ಅಪಲೋ ಆಸ್ಪತ್ರೆಗೋ ಅಥವಾ ಮಲ್ಯಾ ಆಸ್ಪತ್ರೆಗೋ ಹೊಂಗುವುದಕ್ಕೆ ಸಾಧ್ಯವಿಲ್ಲ. ಅವನು ಆ ಆಸ್ಪತ್ರೆಗಳ ಮೆಟ್ಟಿಲು ಹತ್ತುವುದಕ್ಕೂ ಸಾಧ್ಯವಿಲ್ಲ. ಆದರೆ ನಿಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ. ಸದನದಲ್ಲಿ ಡಾಕ್ಟರುಗಳ ಬಗ್ಗೆ ಕೂಡ ಚರ್ಚೆಯಾಗಿದೆ. ಸಚಿವರು ನಾಳೆ ಹಾಕುತ್ತೇವೆ, ನಾಡಿದ್ದು ಹಾಕುತ್ತೇವೆ ಎಂದು ಹೇಳುತ್ತಾರೆ. ಎಷ್ಟೋ ಜನ ವೈದ್ಯರುಗಳಿಗೆ ನೀವು ನೇಮಕಾತಿ ಆದೇಶ ಕೊಟ್ಟರೂ ಕೂಡ ಅವರು ಆ ಆಸ್ಪತ್ರೆಗಳಿಗೆ ಹೋಗಿಲ್ಲ. ಅಂಥವರ ಮೇಲೆ ನೀವು ಯಾವ ಕ್ರಮವನ್ನೂ ಕೂಡ ತೆಗೆದುಕೊಳ್ಳುವುದಿಲ್ಲ. ಕನಿಷ್ಠ ಪ್ರಮಾಣದ ಆರೋಗ್ಯ ಸೌಲಭ್ಯಗಳನ್ನು ಒದಗಿಸುವಂತಹ ವ್ಯವಸ್ಥೆಯ ಕಡೆಗೆ ನೀವು ಕಾಳಜಿ ವಹಿಸದೆ ಹೋದರೆ ಸಾಮಾನ್ಯ ಮನುಷ್ಯ ಹೇಗೆ ಬದುಕುವುದಕ್ಕೆ

ಸಾಧ್ಯವಾಗುತ್ತದೆ? ಇವತ್ತು ಇನ್ನೂ ಒಂದು ಧಾರುಣವಾದ ಪರಿಸ್ಥಿತಿ ಎಂದರೆ, ಯಾವುದೇ ಆಸ್ಪತ್ರೆಗೆ ಚಿಕಿತ್ಸೆಗೆಂದು ಹೋದರೆ ಕೆಲವು ಖಾಯಿಲೆಗಳಿಗೆ ರಕ್ತದ ಅವಶ್ಯಕತೆ ಇದೆ ಎಂದು ಹೇಳುತ್ತಾರೆ. ಬೆಂಗಳೂರಿನಲ್ಲಂತೂ ಸಾಮಾನ್ಯ ಮನುಷ್ಯ ಸುತ್ತಾಡಿ ರಕ್ತ ಕಂಡುಕೊಂಡು ಬರುವುದಕ್ಕೆ ಸಾಧ್ಯವಿಲ್ಲ. ಸ್ವತಃ ನಾನೇ, ನನ್ನ ತಾಯಿಯವರು ಆಸ್ಪತ್ರೆಯಲ್ಲಿದ್ದಾಗ ಅವರಿಗೆ ರಕ್ತ ಬೇಕಾಗಿದ್ದು ಅದಕ್ಕಾಗಿ ಒಂದೂವರೆ ದಿವಸ ಬೆಂಗಳೂರಿನಲ್ಲೆಲ್ಲಾ ಹುಡುಕಾಡಿದೆ. ಆದರೂ ರಕ್ತ ಸಿಗಲಿಲ್ಲ. ಇದರ ಬಗ್ಗೆ ನಿಮಗೆ ಆಲೋಚನೆ ಇಲ್ಲವೇ? ಇದಕ್ಕೆ ಯಾವ ರೀತಿ ವ್ಯವಸ್ಥೆ ಮಾಡಬೇಕು ಎಂಬ ಯೋಚನೆ ಇಲ್ಲವೇ? ಮನುಷ್ಯನ ಜೀವವನ್ನುಳಿಸುವ ಜೀವರಕ್ಷಕ ಔಷಧಗಳು ಹಾಗೂ ರಕ್ತವನ್ನೊದಗಿಸುವ ಬಗ್ಗೆ ನಿಮಗೆ ಕಾಳಜಿ ಇಲ್ಲವೆ? ಹಾಗಾಗದರೆ ಸರ್ಕಾರದ ಜವಾಬ್ದಾರಿಯಾದರೂ ಏನು? ಸದನದಲ್ಲಿ ಅಂಕಿಅಂಶಗಳನ್ನು ಕೊಡುವುದು, ಒಂದು ಲೆಕ್ಕವನ್ನು ಹೇಳಿಬಿಡುವುದು, ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳುವುದು ಅಥವಾ ಇದನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳುವುದಷ್ಟೇ ನಿಮ್ಮ ಜವಾಬ್ದಾರಿಯೇ? ನಾವೆಲ್ಲರೂ ಇವತ್ತು ಆತ್ಮ ದೂಷನೆ ಮಾಡಿಕೊಳ್ಳಬೇಕಾಗಿದೆ ಹಳ್ಳಿಗಳಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಂದ ಹಿಡಿದು, ಪಟ್ಟಣಗಳಲ್ಲಿನ ಸರ್ಕಾರಿ ಆಸ್ಪತ್ರೆಗಳವರೆಗೆ ಸಾಮಾನ್ಯ ಮನುಷ್ಯನಿಗೆ ಬೇಕಾದಂತಹ ಔಷಧಗಳು ಸಿಗುತ್ತಿವೆಯೇ ಎಂಬುದರ ಬಗ್ಗೆ ನಿಮಗೆ ಕಾಳಜಿ ಇಲ್ಲ ಏನಾದರೂ ಮಾತನಾಡಿದರೆ ಪ್ರತಿಯೊಂದಕ್ಕೂ ವಿಶ್ವಬ್ಯಾಂಕಿನ ನೆರವು ಎಂದು ಹೇಳುತ್ತೀರಿ. ಈ ವಿಶ್ವಬ್ಯಾಂಕ್ ನೆರವಿನ ಪ್ರಶ್ನೆ ಎಲ್ಲಿಯವರೆಗೆ ಮುಟ್ಟಿದೆ ಎಂದರೆ, ನಮಗೆ ಬಸ್ ಓಡಿಸುವುದಕ್ಕೂ ವಿಶ್ವಬ್ಯಾಂಕಿನ ನೆರವು, ಆಸ್ಪತ್ರೆ ಕಟ್ಟಡ ಕಟ್ಟುವುದಕ್ಕೂ ವಿಶ್ವಬ್ಯಾಂಕಿನ ನೆರವು ಬೇಕು. ಹೀಗಾದರೆ ನಮಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ವ್ಯವಸ್ಥೆಯೇ ಇಲ್ಲವೆ? ಹಾಗಾಗದರೆ ನೀವು ಬಜೆಟನ್ನು ಏಕೆ ಮಂಡಿಸಬೇಕು? ಸಂಪನ್ಮೂಲಗಳನ್ನು ಕ್ರೋಢೀಕರಿಸುವ ವಿಧಾನಕ್ಕೆ ನೀವು ಹಮ್ಮಿಕೊಂಡ ಕಾರ್ಯಕ್ರಮವೇನು? ಸರ್ಕಾರದವರಿಗೆ ಏನೂ ಗೊತ್ತಿಲ್ಲವೆ? ಕರ್ನಾಟಕ ರಾಜ್ಯದಲ್ಲಿ ಎಷ್ಟು ಸಾವಿರ ಕೋಟಿ ರೂಪಾಯಿ ಎಕ್ಸೈಸ್ ಲಾಭಿಯಿಂದ ಬಾಕಿ ಬರಬೇಕಾಗಿದೆ? ಅದರಲ್ಲಿ ಎಷ್ಟು ತೆರಿಗೆ ಕಳ್ಳತನ ಆಗುತ್ತಿದೆ? ನಮ್ಮ ಹಣಕಾಸು ಮಂತ್ರಿಗಳು ಸದನದಲ್ಲಿಲ್ಲ. ಒಂದೇ ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ಸೇಲ್ಸ್ ಟ್ಯಾಕ್ಸ್ ವಸೂಲಿ ಮಾಡುವುದಕ್ಕೆ ಅಧಿಕಾರಿಗಳು ಹೋಗುತ್ತಾರೆ ಪ್ರತಿ ಸೇಲ್ಸ್ ಟ್ಯಾಕ್ಸ್ ಆಫೀಸರ್ ಬಂದು ಟಿ.ಬಿ. (ಪ್ರವಾಸಿ ಮಂದಿರ) ಯಲ್ಲಿ ಒಂದು ಗಂಟೆ ಕಾಲ ಕುಳಿತಿರುತ್ತಾರೆ. ಆ ಊರಿನಲ್ಲಿರುವ ವ್ಯಾಪಾರಸ್ಥರೆಲ್ಲಾ ಅವರಿಗೆ ಮಾಮೂಲಿ ಕೊಟ್ಟು, ಅಲ್ಲಿಂದಲೇ ಅವರನ್ನು ಕಳುಹಿಸಿಬಿಡುತ್ತಾರೆ. ಆ ಅಧಿಕಾರಿ ಅಂಗಡಿಗಳ ಹತ್ತಿರ ಬಂದು ಯಾರನ್ನೂ ಚೆಕ್ ಮಾಡುವುದಿಲ್ಲ. ಇದು ನಿಮಗಾರಿಗೂ ಗೊತ್ತಿಲ್ಲವೇ? ಗೊತ್ತಿದ್ದರೂ ನೀವು ಏನೂ ಮಾಡುವುದಕ್ಕಾಗಿಲ್ಲವೆ? ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು. ಯಾವಾಗಲೂ ಸಾಲವನ್ನೇ ಮಾಡಿ ನಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತೇವೆ ಎಂದರೆ ಯಾವುದೇ ರಾಜ್ಯ ಉಳಿಯುವುದಕ್ಕೆ ಸಾಧ್ಯವಿದೆಯೇ? ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳಾಗಬಹುದು ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳು ಆಗಬಹುದು, ಆರ್.ಟಿ.ಓ. ಕಛೇರಿಯಲ್ಲಿ, ನ್ಯಾಷನಲ್ ಹೈವೇಗಳಲ್ಲಿ ಈ ರೀತಿ ವ್ಯವಹಾರಗಳು ನಡೆಯುತ್ತಿವೆ. ನಾನು ಒಂದು ನ್ಯಾಷನಲ್ ಹೈವೇನಲ್ಲಿದ್ದೇನೆ. ಅಲ್ಲಿ ಎರಡು ಚೆಕ್ ಪೋಸ್ಟ್‌ಗಳಿವೆ. ಆ ಚೆಕ್ ಪೋಸ್ಟ್‌ಗಳಲ್ಲಿ ಒಂದು ಆರ್.ಟಿ.ಓ ಚೆಕ್ ಪೋಸ್ಟ್ ಮತ್ತೊಂದು ಫಾರೆಸ್ಟ್ ಚೆಕ್

ಪೋಸ್ಟ್. ಅವುಗಳಲ್ಲಿ ಒಂದು ದಿವಸಕ್ಕೆ ಅವರು ಎಷ್ಟು ಹಣವನ್ನು ಅನಧಿಕೃತವಾಗಿ ವಸೂಲು ಮಾಡುತ್ತಾರೆ ಎಂದರೆ, ಅಲ್ಲಿ ಅವರು ಒಂದು ಹುಂಡಿಯನ್ನು ಇಟ್ಟಿದ್ದಾರೆ. ರಶೀದಿ ಇಲ್ಲದೆ ಎಲ್ಲರೂ ಬಂದು ಆ ಹುಂಡಿಗೆ ಹಣವನ್ನು ಹಾಕಿ ಹೋಗುತ್ತಾರೆ. ಸಂಜೆಯ ನಂತರ ಅಧಿಕಾರಿಗಳು ಆ ಹುಂಡಿಯನ್ನು ತೆಗೆದುಕೊಂಡು ಹೋಗುತ್ತಾರೆ. ಹೀಗಾದರೆ ನೀವು ಸಂಪನ್ಮೂಲಗಳನ್ನು ಹೇಗೆ ಕ್ರೋಢೀಕರಿಸುತ್ತೀರಿ? ನಮ್ಮ ಸರ್ಕಾರಕ್ಕೆ ಬರಬೇಕಾದ ರೆವಿನ್ಯೂ ರೆಸಿಫ್ಟ್ ಎಷ್ಟು? ನೀವು ಹೇಳುವ ಲೆಕ್ಕದ ಪ್ರಕಾರ ಕರ್ನಾಟಕ ರಾಜ್ಯದ ಆದಾಯದಲ್ಲಿ ಶೇಕಡ ಒಂದರಷ್ಟು ಜನಸಂಖ್ಯೆ ಇರುವಂತಹ ಸರ್ಕಾರಿ ನೌಕರರಿಗೆ ಶೇಕಡ 90 ರಷ್ಟು ಹೋಗುತ್ತಿದೆ. ಇನ್ನು ನೀವು ಸಾಮಾನ್ಯ ಜನರಿಗೆ ಏನು ಮಾಡುತ್ತೀರಿ? ಇಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತೀರಿ? ಅದಕ್ಕೆ ನೀವು ಯಾವ ಕಾರ್ಯಕ್ರಮವನ್ನೂ ಹಾಕಲಿಲ್ಲ. ಮುಂಗಡ ಪತ್ರದಲ್ಲಿ ಬರುವುದೆಷ್ಟು, ಹೋಗುವುದೆಷ್ಟು? ಯಾವ ಯಾವ ಮೂಲಗಳಿಗೆ ಎಷ್ಟನ್ನು ಖರ್ಚು ಮಾಡುತ್ತೀರಿ? ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಹಲವಾರು ರೀತಿಯ ತೆರಿಗೆ ಕಳ್ಳತನವಾಗುತ್ತಿದೆ. ಅದನ್ನು ಕೇಳುವವರು ಯಾರೂ ಇಲ್ಲ. ಯಾವ ವ್ಯಾಪಾರಸ್ಥರು ಇವತ್ತು ಸರಿಯಾದ ರೀತಿಯಲ್ಲಿ ಸೇಲ್ಸ್ ಟ್ಯಾಕ್ಸ್‌ನ್ನು ಕಟ್ಟುತ್ತಿದ್ದಾರೆ? ಇನ್‌ಕಮ್ ಟ್ಯಾಕ್ಸನ್ನು ಯಾರು ಸರಿಯಾಗಿ ಕಟ್ಟುತ್ತಿದ್ದಾರೆ? ಯಾವ ಸರ್ಕಾರ ಬಂದರೂ ಕೂಡ ಅವರು ರಾಜರೇ; ಸರ್ಕಾರಕ್ಕೆ ಬಹಳ ಆತ್ಮೀಯರೇ. ಅಂದರೆ ಇವರ ಮೇಲೆ ಯಾವುದೇ ರೀತಿಯ ಹಿಡಿತವಿಲ್ಲ. ಹೀಗಾದರೆ, ರಾಜ್ಯ ಸರ್ಕಾರ ಸ್ವತಂತ್ರವಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಇರುವಂತಹ ಕಾರ್ಯಕ್ರಮಗಳೇನು? ಅದನ್ನು ಬಿಟ್ಟು ಮಾತೆತ್ತಿದರೆ ನೀವು ವಿಶ್ವಬ್ಯಾಂಕ್ ಸಾಲ ಎಂದು ಹೇಳುತ್ತೀರಿ. ಸಣ್ಣ ನೀರಾವರಿ ಮಂತ್ರಿಗಳು ಕರೆಯಲ್ಲಿ ಹೂಳೆತ್ತುವುದಕ್ಕೂ ವಿಶ್ವಬ್ಯಾಂಕ್ ಸಾಲ, ಕಾಲುವೆ ಮಾಡಲು ವಿಶ್ವಬ್ಯಾಂಕ್ ಸಾಲ ಎಂದು ಯಾವಾಗಲೂ ಹೇಳುತ್ತಿರುತ್ತಾರೆ. ನಮ್ಮ ಮುಜರಾಯಿ ಖಾತೆಯ ಮಂತ್ರಿಗಳಾದ ಮುನಿಯಪ್ಪನವರೊಬ್ಬರೇ ಅದೃಷ್ಟವಂತರು. ಅವರು ಮಾತ್ರ ಇನ್ನೂ ವಿಶ್ವಬ್ಯಾಂಕ್ ಸಾಲಕ್ಕೆ ಹೋಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅವರಿಗೆ ಮಂಗಳಾರತಿಯಿಂದ ಬರುವ ದುಡ್ಡೇ ಜಾಸ್ತಿ ಇದೆ ಎಂದು ಕಾಣುತ್ತದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಹೀಗಾಗಿ ಇವತ್ತು ಎಲ್ಲದಕ್ಕೂ ವಿಶ್ವಬ್ಯಾಂಕ್ ಮತ್ತು ವಿದೇಶಿ ಸಾಲಕ್ಕೆ ಹೋಗುತ್ತಿದ್ದಾರೆ. ಈ ರಾಜ್ಯದ ಪರಿಸ್ಥಿತಿ, ಈ ದೇಶದ ಪರಿಸ್ಥಿತಿ ಏನು ಎಂಬ ವಿಷಯವನ್ನು ನಾವು ಆಲೋಚನೆ ಮಾಡಬೇಕಾಗಿದೆ ಆದುದರಿಂದ ನಾನು ಇವತ್ತು ಜನತಾದಳ ಪಕ್ಷದ ವಕ್ತಾರರಾದಂತಹ ಶ್ರೀ ಸಿಂಧ್ಯಾರವರಿಗೂ ಮತ್ತು ಇತರ ಸ್ನೇಹಿತರಿಗೂ ಹೇಳುವುದೇನೆಂದರೆ ನಿಮಗೆ ಪ್ರಾಮಾಣಿಕವಾದ ಜನಪರವಾದ ಕಾಳಜಿ ಇದ್ದರೆ, ರಾಜಕೀಯ ಇಚ್ಛಾಶಕ್ತಿ ನಿಮಗಿದ್ದರೆ, ಜನಪರ ಕೆಲಸಗಳನ್ನು ಮಾಡಿ. ಈಗಲೂ ಕಾಲ ಮಿಂಚಿಲ್ಲ. ನಿಮ್ಮ ಸರ್ಕಾರವನ್ನು ಯಾರೂ ಉರುಳಿಸಲು ಸಾಧ್ಯವಿಲ್ಲ.ಹಾಗೇನಾದರೂ ಉರುಳಿಸಿದರೆ ನೀವೇ ನಿಮ್ಮ ಸರ್ಕಾರವನ್ನು ಉರುಳಿಸಬೇಕು. ಬೇರೆ ಯಾರೂ ಉರುಳಿಸಲು ಸಾಧ್ಯವಿಲ್ಲ. ನೀವು ಆ ಕೆಲಸವನ್ನು ಮಾಡುವುದಿಲ್ಲ ಎಂಬ ನಂಬಿಕೆಯಿಂದ ನಾನು ಇವತ್ತು ಈ ಮಾತನ್ನು ಹೇಳುತ್ತಿದ್ದೇನೆ. ಮುಂದೆ ನೀವೇನಾದರೂ ಮತ್ತೆ ರಾಜಕೀಯವಾಗಿ ಅಧಿಕಾರವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಉದ್ದೇಶವಿದ್ದರೆ ಜನಪರವಾದ ಕಾರ್ಯಗಳನ್ನು ಮಾಡಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎನ್. ರಾಜಣ್ಣ (ಭಾರತೀನಗರ):- ಮಾನ್ಯ ಅಧ್ಯಕ್ಷರೇ, 9ನೇ ತಾರೀಖು ಮಧ್ಯಾಹ್ನ 12 ಗಂಟೆ 15 ನಿಮಿಷ ಷಾರ್ಪ್ ಆಗಿ ಇಂಡಿಯನ್ ಸ್ಟಾಂಡರ್ಡ್ ಟೈಮ್‌ನಲ್ಲಿ (ಐಎಸ್ಟಿ) ರಾಜ್ಯಪಾಲರ ಭಾಷಣವನ್ನು ಶುರುಮಾಡಬೇಕಾದರೆ ನಾವು ರಾಜ್ಯಪಾಲರನ್ನು ಸಾಮಾನ್ಯವಾಗಿ ಕರೆಯುವುದು your Excellency Janab Mr. Khurshid Alam Khanji ಎಂದು ಹೇಳಿ ನಾವು ಕರೆಯುವುದು. ಅಷ್ಟು ರೆಸ್ಪೆಕ್ಟ್ ಕೊಟ್ಟು ಸ್ಪೀಕರ್ ಛೇರ್ಮನ್ with the band of Karnataka state police with melodious music, with members of both the House with pin-drop silence, receive his excellency the Governor by the speaker, Chairman and our officials, ಭಾಷಣವನ್ನು ಓದುವುದಕ್ಕೆ ಶುರುಮಾಡಿದರು. ನಾನು ಒಂದೇ ಹೇಳುವುದು. ಅನೇಕ ಧೀಮಂತ ನಾಯಕರೆಲ್ಲಾ ಅಸೆಂಬ್ಲಿಗೆ ಬಂದು ಕುಳಿತುಕೊಂಡು ಹೋಗಿದ್ದಾರೆ ಇಂಡಿಯಾ ದೇಶದಲ್ಲಿ: ದಿ ಬೆಸ್ಟ್ ವಿಧಾನಸೌಧ ಕಟ್ಟಡ ಎಂದರೆ ಕರ್ನಾಟಕ ವಿಧಾನಸಭೆ. ಇದರಲ್ಲಿ ಧೀಮಂತ ನಾಯಕರಾದ ಕೆ.ಸಿ. ರೆಡ್ಡಿಯಿಂದ ಹಿಡಿದು including our Hon'ble Chief Minister Sri J. H. Patel.

ಶ್ರೀ ವಾಟಾಳ್ ನಾಗರಾಜ್:- ಕೆ.ಸಿ ರೆಡ್ಡಿ ಬರಲಿಲ್ಲ. ಕಡೀದಾಳ್ ಮಂಜಪ್ಪನವರು ಮಾತ್ರ ಬಂದರು. ಹನುಮಂತಯ್ಯನವರು ಬರುವುದಕ್ಕಾಗಲಿಲ್ಲ. ಕೆ.ಸಿ. ರೆಡ್ಡಿಯವರು ಬರುವುದಕ್ಕಾಗಲಿಲ್ಲ.

ಶ್ರೀ ಎನ್. ರಾಜಣ್ಣ:- ರೂಲ್ ಮಾಡಿದ್ದಾರೆ. ಕಡಿದಾಳ್ ಮಂಜಪ್ಪನವರ ಕಾಲದಿಂದ ಇದು ಶುರುವಾಗಿದೆ. ಎಂದೆಂಥ ಧೀಮಂತ ನಾಯಕರು ಬಂದು ಹೋಗಿದ್ದಾರೆ. ಇಂಥ ವಿಧಾನಸಭೆಗೆ ನಮ್ಮನ್ನು ಜನರು ಆರಿಸಿ ಕಳುಹಿಸಿದ್ದಾರೆ. ಆದರೆ, ನನ್ನ ಹಿರಿಯಲ್ಲಿ ಒಂದೇ ಒಂದು ರಿಕ್ವೆಸ್ಟ್. ಯಾವಾಗಲೂ ಕನ್ನಡ ಇಂಗ್ಲೀಷ್ ಭಾಷೆಯ ಬಗ್ಗೆ ವ್ಯಾಮೋಹ ಇದ್ದೇ ಇರುತ್ತದೆ ರಾಜ್ಯಪಾಲರು ಬಂದು ತಮ್ಮ ಭಾಷಣವನ್ನು ಓದುವಾಗ ನಾವು ಬಹಳ ಪಿನ್‌ಡ್ರಾಪ್ ಸೈಲೆನ್ಸ್‌ನಿಂದ ಕೇಳಬೇಕು ಎಂದು ಹೇಳಿ ನಾನು ಹಿರಿಯರನ್ನು ಕೇಳಿಕೊಳ್ಳುತ್ತೇನೆ. ಅವತ್ತು ಏನಾಯಿತು? ಅವರು ಬರುವಾಗ ಬಹಳ ಸಂತೋಷವಾಗಿ ಬಂದರು. ಹೋಗುವಾಗ ಅವರ ಮುಖ ನೋಡಿದರೆ, ಒಂದು ತರಹ ಅಳುವ ಮುಖದಲ್ಲಿ ಹೋದರು. ಅದಕ್ಕೋಸ್ಕರ ನಾನು ನಿಮ್ಮೆಲ್ಲರ ಪರವಾಗಿ ಅವರಲ್ಲಿ ಅಪಾಲಜಿಯನ್ನು ಮಾಡಿಕೊಳ್ಳುತ್ತೇನೆ. ತಪ್ಪಾಯಿತು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಮುಂದೆ ನಾನು ತಿಳಿಯುತ್ತೇನೆ. ನಮ್ಮ ಸ್ಪೀಕರ್ಸ್ ಬಹಳ ಒಳ್ಳೆಯವರು ಇದ್ದಾರೆ. ಟೈಮ್‌ನಲ್ಲಿ ನೀವು ಮಾಡಿ. They are very good friends ನಮ್ಮ ಇಬ್ಬರೂ ಸ್ಪೀಕರ್ ಬಹಳ ನೋಬಲ್ ಸ್ಪೀಕರ್ಸ್ ಇದ್ದಾರೆ. ನಿಮ್ಮನ್ನು ಬಹಳ ಅರ್ಥಮಾಡಿಕೊಂಡು, ನಿಮ್ಮ ಸೀನಿಯಾರಿಟಿಯನ್ನು ಬಹಳ ಅರ್ಥಮಾಡಿಕೊಂಡು ನಡೆದುಕೊಳ್ಳುವಂಥ ನಮ್ಮ ಸ್ಪೀಕರ್ಸ್ ಸೆಕ್ಷನ್ 324 ನ್ನು ಮುಟ್ಟುವುದೇ ಇಲ್ಲ. ಸೆಕ್ಷನ್ 324 Rules should be observed by the members. ಅದನ್ನು ಅವರು ಮುಟ್ಟುವುದೇ ಇಲ್ಲ. ಅಂದರೆ ಅಷ್ಟು ಲಿಬರಲ್ ಆಗಿದ್ದಾರೆ. ವಾಟಾಳ್ ನಾಗರಾಜ್ ಎಷ್ಟು ಸಾರಿ, ಏನು ಮಾಡಿದರೂ, ನಮ್ಮ ಸ್ಪೀಕರ್ ಬಹಳ ಲಿಬರಲ್ ಆಗಿದ್ದಾರೆ. ಬಹಳ ಸಂತೋಷ.

ನಾವು ನೀವು ಹೇಳುವುದನ್ನು ಕೇಳುತ್ತಿರುತ್ತೇವೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ವರ್ಷಕ್ಕೆ ಒಂದೇ ಸಾರಿ ಬರುತ್ತದೆ. I request the senior leaders to honour and respect our Excellency Janab Mr. Khurshid Alam Kahnji, The Governor of Karnataka.

ಶ್ರೀಮತಿ ಬಿ.ಟಿ. ಲಲಿತಾನಾಯಕ್:- ಮಾನ್ಯ ಉಪಾಧ್ಯಕ್ಷರೇ, ಇದೇನು ಆಂಗ್ಲಕನ್ನಡವೋ ಅಥವಾ ಕನ್ನಡಾಂಗ್ಲವೋ ಗೊತ್ತಾಗುತ್ತಿಲ್ಲ.

ಉಪಾಧ್ಯಕ್ಷರು:- ಅದರಲ್ಲಿ ಎರಡೂ ಕೂಡ ಇವೆ.

ಶ್ರೀ ಎಸ್. ರಾಜಣ್ಣ:- ರಾಜ್ಯಪಾಲರ ಭಾಷಣ ಕಾನ್ಸ್‌ಟಿಟ್ಯೂಷನ್ ಪ್ರಕಾರ Article says, "At the Commencement of the first session after each general election to the Legislative Assembly and at the commencement of the first session of each year, the Governor shall address the Legislative Assembly or in the case of a state having a Legislative Council, both Houses assembled together and inform the Legislature of the causes of its summons."

ಅದಕ್ಕೋಸ್ಕರ ಆರ್ಟಿಕಲ್ 176 ರ ಪ್ರಕಾರ ಇನ್ನು ಮುಂದೆ ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ಹಾಗೆ ಅಬ್ಸರ್ವ್ ಮಾಡಬೇಕೆಂದು ಹೇಳುತ್ತೇನೆ. ತಾವು ಹಿರಿಯರು. ಬಹಳ ಧೀಮಂತ ನಾಯಕರು. ನಿಮ್ಮ ಬಗ್ಗೆ ನಮಗೆ ಕಾಳಜಿ ಇದೆ. ಕನ್ನಡದ ಬಗ್ಗೆ ಹೋರಾಟ ಮಾಡುತ್ತೀರಿ. ಅದಕ್ಕೆ ನಾವು ನಿಮ್ಮ ಜೊತೆ ಸೇರುತ್ತೇವೆ. ರಾಜ್ಯಪಾಲರು ವರ್ಷಕ್ಕೆ ಒಂದು ಸಾರಿ ಬರುತ್ತಾರೆ. ಅದಕ್ಕೋಸ್ಕರ ನಾವೆಲ್ಲಾ ಸೇರಿ ಅವರಿಗೆ ಹಾನರ್ ಮಾಡಬೇಕು. ರೆಸ್ಪಕ್ಟ ಮಾಡಬೇಕು. ಈಗ ಸರ್.ಎಂ.ವಿಶ್ವೇಶ್ವರಯ್ಯ ಎಂದು ಏಕೆ ಕರೆಯಬೇಕು? ಸರ್ ಎಂದು ಏಕೆ ಕರೆಯಬೇಕು? ಯುವರ್ ಲಾರ್ಡ್ಶಿ ಎಂದು ಏಕೆ ಕರೆಯಬೇಕು. ಆ ಎಕ್ಸಲೆನ್ಸಿ, ಲಾರ್ಡ್ಶಿ, ಸರ್ ಗೆ ರೆಸ್ಪೆಕ್ಟ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಪ್ಯಾರಾ 2 ರಲ್ಲಿ ಗೌರ್ನರ್ ಅಡ್ರೆಸ್‌ನಲ್ಲಿ ಹೇಳುತ್ತಾರೆ ಎಲ್ಲರೂ ಅದನ್ನು ಟಚ್ ಮಾಡಿದ್ದೀರಿ. ಲೋಕಸಭೆಗೆ ಮುಕ್ತ ಮತ್ತು ನ್ಯಾಯಬದ್ಧ ರೀತಿಯಲ್ಲಿ ಚುನಾವಣೆಯನ್ನು ಶಾಂತ ವಾತಾವರಣದಲ್ಲಿ ನಡೆಸಲಾಯಿತು. ಚುನಾವಣೆಯಲ್ಲಿ ಭಾರೀ ಸಂಖ್ಯೆಯಲ್ಲಿ ಪಾಲುಗೊಂಡಿದ್ದಕ್ಕಾಗಿ ಮತ್ತು ರಾಜ್ಯವು ಚುನಾವಣೆಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕಾಗಿ ಕರ್ನಾಟಕ ಜನತೆಯನ್ನು ಅಭಿನಂದಿಸುತ್ತೇನೆ" ಅವರು ಹೋಗುತ್ತವೆ. ಈ ಭಾರಿ ಚುನಾವಣೆ ಬಹಳ ನೆಮ್ಮದಿಯಿಂದ ನಡೆಯಿತು. ಅದನ್ನು ರಾಜ್ಯಪಾಲರು ಅಪ್ರೀಷಿಯೇಟ್ ಮಾಡಿದ್ದಾರೆ. ಗೆಲ್ಲುವುದು, ಸೋಲುವುದು ಮುಖ್ಯವಲ್ಲ ಸಾರ್. ನಾವು ಗೆದ್ದಮೇಲೆ, ನಮ್ಮ ದೇವೇಗೌಡರ ಸರ್ಕಾರ ಮತ್ತು ಜೆ.ಹೆಚ್. ಪಟೇಲ್ ಸರ್ಕಾರ ಮೂರು ವರ್ಷದಲ್ಲಿ ಏನು ಮಾಡಿದೆ, ಅದು ಮುಖ್ಯ.

ಶ್ರೀ ವಾಟಾಳ್ ನಾಗರಾಜ್:- ಏಕೆ ಸೋತಿರಿ?

ಶ್ರೀ ಎಸ್. ರಾಜಣ್ಣ:- ಸೋಲು, ಗೆಲುವು ಮುಖ್ಯವಲ್ಲ ಸಾರ್.

ಶ್ರೀ ವಾಟಾಳ್ ನಾಗರಾಜ್:- ಏಕೆ ಸೋತರು ಎಂದು ನಾನು ಕೇಳುತ್ತೇನೆ. ದೇವೇಗೌಡರು, ಜೆ.ಹೆಚ್. ಪಟೇಲರು ಇಷ್ಟೊಂದು ಅನುಕೂಲಗಳನ್ನು ಮಾಡಿದ್ದರೆ ನೀವು ಏಕೆ ಸೋತಿರಿ ಸ್ವಾಮಿ?

ಶ್ರೀ ಎನ್. ರಾಜಣ್ಣ:- ಸೋತವನು ಗೆಲ್ಲುತ್ತಾನೆ. ಗೆದ್ದವನು ಸೋಲುತ್ತಾನೆ. ಮಾಜಿ ಪ್ರಧಾನಿಮಂತ್ರಿ ಇಂದಿರಾಗಾಂಧಿಯವರು ಸೋತರು. ಮಾನ್ಯ ಹನುಮಂತಯ್ಯನವರು ಸೋತರು. ಕಾರಾಜ್ ನಾಡಾರ್‌ರವರು ಸೋತರು. ಎಂದೆಂಥ ಧೀಮಂತ ನಾಯಕರಲ್ಲಾ ಸೋಲುವಾಗ ಇದೊಂದು ತರಹ ಗಾಳಿ ಬೀಸಿತು. ಮಾನ್ಯ ಶ್ರೀರಾಮರೆಡ್ಡಿಯವರು ಬಹಳ ಚೆನ್ನಾಗಿ ಹೇಳಿದರು. ಈ ಬಾರಿ ನಾವು ಮಾಡಿರುವ ಕೆಲಸಕ್ಕೆ ಕೃತಜ್ಞತೆಯೇ ಬರಲಿಲ್ಲ ಅವರಿಗೆ ಮನೆ ಕಟ್ಟಿದ್ದೀರಿ. ಮನೆ ಕಟ್ಟಿ, ಅವರಿಗೆ ವಾಸ ಮಾಡುವುದಕ್ಕೆ ಜಾಗ ಕೊಟ್ಟಿದ್ದೀರಿ ಅವರಿಗೆ ನಲ್ಲಿ ಹಾಕಿಸಿಕೊಟ್ಟಿದ್ದೀರಿ. ಅವರಿಗೆ ವಿದ್ಯುಚ್ಛಕ್ತಿ ದೀಪವನ್ನು ಕೊಟ್ಟಿದ್ದೀರಿ. ಟಾಯ್‌ಲೆಟ್ ಕೊಟ್ಟಿದ್ದೀರಿ. ಇನ್ನೇನು ಮಾಡಬೇಕು ಸ್ವಾಮಿ. ಇನ್ನೂ ಗುಡಿಸಬೇಕು. ಆದರೂ ವೋಟು ಕೊಡಲಿಲ್ಲ. ನನಗೇನು ಮಾಡಿದೆ ಎಂದು ಕೇಳುವಂಥ ಕಾಲ. ಇದೊಂದು ರೀತಿಯ ಗಾಳಿ. ಈ ಭಾರಿ ಇವರಿಗೆ ಕೊಡೋಣ. ಒಂದು ಬಾರಿ ಇವರಿಗೆ ಕೊಟ್ಟುಬಿಡೋಣ. ಕೊನೆಯ ಬಾರಿ ಎಂದಿದ್ದಾರೆ. ಈ ಬಾರಿ ಎಲ್ಲರೂ ಸೋತಿದ್ದಾರೆ. ಎಲ್ಲಿ ಮೆಜಾರಿಟಿ ಬಂದಿದೆ? ಮೆಜಾರಿಟಿ ಬಂದರೆ ಗೆದ್ದ ಹಾಗೆ. ಆದರೆ ಮೆಜಾರಿಟಿ ಬರಲಿಲ್ಲ. ಎಲ್ಲರೂ ಸೋತಿದ್ದಾರೆ. ನೀವು ಸೀನಿಯರ್ ಲೀಡರ್. ಇದರ ಬಗ್ಗೆ ಚಿಂತನೆ ಮಾಡಬೇಕು. ಯಾರೂ ಗೆಲ್ಲಲಿಲ್ಲ. ಇವತ್ತು 18 ಪಾರ್ಟಿಯವರು ಸೇರಿಕೊಂಡು ಅಲ್ಲಿ ಅವರು ಸರ್ಕಾರವನ್ನು ನಡೆಸಬೇಕು. ಒಂದು ಗಾದೆ ಇದೆ. ಈ 18 ಪಾರ್ಟಿ ಎಂದರೆ ದೊಡ್ಡ ರಾಡ್, ಅದು ಎರಡು ಮೂರು ಪೀಸ್ ಆದರೆ ವೆಲ್ಡ್ ಮಾಡಬಹುದು. ಸಾಲ್ಡರ್ ಮಾಡಬಹುದು. ಆದರೆ ಅದನ್ನು ವೆಲ್ಡ್, ಸಾಲ್ಡರ್ ಮಾಡುವ ಮುಂಚೆ, ಅದನ್ನು ಹೊಡೆದರೆ ಬರತಕ್ಕ ಶಬ್ದ ವೆಲ್ಡ್ ಹಾಗೂ ಸಾಲ್ಡರ್ ಮಾಡಿದ ಮೇಲೆ ಬರುವುದಿಲ್ಲ. A broken Iron rod may be welded or soldered, but it loses its original sound. 18 ಪೀಸ್‌ಗಳನ್ನು ಸೇರಿಸಿ ವೆಲ್ಡ್ ಮಾಡಿದರೆ ಆದ್ದರಿಂದ You will not get the correct sound. ಮುಂದೆ ನಾವು ನೋಡೋಣ ಅದನ್ನು ನಾನು ಹೇಳುವುದಿಲ್ಲ. ನೀವು 2 ನೇ ಪ್ಯಾರಾ ಟಚ್ ಮಾಡಬೇಕಾದರೆ ಫೋರ್ಸ್ಟ್ ಆಫ್ ದಿ ಲೀಡರ್ಸ್ ಒಂದು ಮಾತನ್ನು ಹೇಳಿದರು. ನಾನು ಒಂದು ವಿಷಯ ತಮಗೆ ಕೇಳಬೇಕು. ಇವತ್ತು ಬಿಜೆಪಿ ನಾಯಕರು ಹೊರಗಡೆ ಹೋಗಿದ್ದಾರೆ. ಅವರು ಇದ್ದರೆ ಚೆನ್ನಾಗಿತ್ತು. ಏಪ್ರಿಲ್ 11ನೇ ತಾರೀಖು 1997 ರಲ್ಲಿ ದೇವೇಗೌಡರು ರಾತ್ರಿ 10 ಗಂಟೆಯಿಂದ 12 ಗಂಟೆಯವರೆಗೂ ಪಾರ್ಲಿಮೆಂಟಿನಲ್ಲಿ ಭಾಷಣವನ್ನು ಮಾಡಿದರು. ಭಾಷಣ ಮಾಡುವಾಗ ಅವತ್ತು The whole country obseved ಓಟು ಹಾಕಿದರು ನಮ್ಮ ರೂಲಿಂಗ್ ಪಾರ್ಟಿಗೆ 156 ಏನೋ ಬಂತು. ಅವತ್ತು ಬಿಜೆಪಿಯವರು ಸರ್ಕಾರ ನಿಮಗೆ ಸಪೋರ್ಟು ಮಾಡುತ್ತೇವೆ ಎಂದಿದ್ದರೆ ಇವತ್ತು ಈ ಚುನಾವಣೆ ಬರುತ್ತಿರಲಿಲ್ಲ ಎರಡನೆಯದು ಜೈನ್ ಕಮಿಷನ್ ಇಟ್ಟುಕೊಂಡು ಡಿಎಂಕೆ ಮಂತ್ರಿಗಳನ್ನು ಹೊರಗಡೆ ಇಡಬೇಕು ಎಂದರು. ಅದು. ಆಗುತ್ತದೆಯೇ? ನಾವೆಲ್ಲಾ ಯುನೈಟೆಡ್ ಫ್ರಂಟ್. ಒಂದಾಗಿ ಇದ್ದುಕೊಂಡು ಆ ಮಂತ್ರಿಗಳನ್ನು ಹೊರಗಡೆ ಇಟ್ಟರೆ ಆಗ ತಮಿಳುನಾಡನ್ನೇ ಹೊರಗಡೆ ಇಟ್ಟಂತೆ ಆಗುತ್ತದೆ. ಆದ್ದರಿಂದ There is no material

eveidence to prove the charge on DMK ಎಲ್‌ಟಿಟಿಇ ಮಾಡಿರುವುದು ಸೆಪರೇಟ್. ಇವರ ನಾಯಕರು ಮಾಡಿದ್ದಾರೆ ಎನ್ನುವುದಕ್ಕೆ ಯಾವುದೇ ಎವಿಡೆನ್ಸ್ ಇಲ್ಲ. ಆದರೂ ಸಹ ಆ ಸರ್ಕಾರವನ್ನು ಬೆಳೆದರು. 1100 ಕೋಟಿ ರೂ.ಗಳನ್ನು ಈ ಚುನಾವಣೆಗಾಗಿ ಖರ್ಚು ಮಾಡಿದರು. ಆ 1100 ಕೋಟಿ ರೂಪಾಯಿಗಳಿಂದ ಏನು ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಬಹುದಾಗಿತ್ತು ಎಂಬುದನ್ನು ನಾವು ಯೋಚನೆ ಮಾಡಬೇಕು. ಮಾನ್ಯ ದೇವೇಗೌಡರು ಕೊನೆಯ ದಿನ, ಈಚೆಗೆ ಬಂದಾದ ಮೇಲೆ, ಮತ್ತು ಇಲ್ಲಿ ನಮ್ಮ ಮಾನ್ಯ ಜೆ.ಹೆಚ್. ಪಟೇಲರು ಮುಂತಾಗಿ, ನಮ್ಮ ಸರಕಾರದ ಎಲ್ಲರೂ ಕೂಡ ರೈತರ ಬಗ್ಗೆ ಚಿಂತನೆ ಮಾಡಿದ್ದಾರೆ. ಕಾರ್ಮಿಕರ ಬಗ್ಗೆ ಚಿಂತನೆ ಮಾಡಿದ್ದಾರೆ. ನಿರುದ್ಯೋಗಿಗಳ ಬಗ್ಗೆ ಚಿಂತನೆ ಮಾಡಿದ್ದಾರೆ. 1994ರ ಒಂದು ಅಂಕಿಅಂಶಗಳ ಪ್ರಕಾರ 70 ಮಿಲಿಯನ್ ಅನ್‌ಎಂಪ್ಲಾಯ್ಡ್ ಗ್ರಾಜ್ಯುಯೇಟ್ಸ್ ನಿರುದ್ಯೋಗಿಗಳಾಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಷ್ಟೇ ಅಲ್ಲ, ಇನ್ನೂ ಅನೇಕ ವಿಚಾರಗಳ ಬಗ್ಗೆ ಚಿಂತನೆ ಮಾಡಿದ್ದಾರೆ. ವಿಶ್ವಸುಂದರಿ ಸ್ಪರ್ಧೆ ಬಗ್ಗೆ, ನ್ಯಾಷನಲ್ ಗೇಮ್ಸ್ ಬಗ್ಗೆ, ವಿದ್ಯುತ್ ಬಿಲ್ಲನ್ನು ಹೆಚ್ಚು ಮಾಡುವ ಬಗ್ಗೆ ಚಿಂತನೆ ಮಾಡಿದ್ದಾರೆ. ಬಸ್ ದರ ಹಾಗೂ ಹಾಲಿನ ದರಗಳನ್ನು ಏರಿಸಲು ಚಿಂತನೆ ಮಾಡಿದ್ದಾರೆ. ಒಬ್ಬ ಮಾಲ್‌ಪ್ರಾಕ್ಟೀಸ್ ಮಾಡಿದ ಎಂದು ಒಬ್ಬ ಮಂತ್ರಿ ರಾಜೀನಾಮೆ ಕೊಡಬಹುದು, ಇನ್ನೊಬ್ಬರು ಒಂದು ಕೊಲೆಯಲ್ಲಿ ಆ ಪಕ್ಷದವರು ಪಾಲುಗಾರರಿದ್ದಾರೆ ಅವರನ್ನು ಕೆಲವು ದಿನಗಳ ಕಾಲ ಹೊರಗೆ ಇಡಿ ಅಂದರೂ ಹಾಗೆ ಮಾಡಲು ಆಗಲಿಲ್ಲವೇ?

ಶ್ರೀ ಎಸ್. ರಾಜಣ್ಣ:- ನಮ್ಮ ಸರಕಾರದವರು ಕಾರ್ಮಿಕರ ಬಗ್ಗೆ ಒಳ್ಳೆಯ ಚಿಂತನೆ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸಚಿವರಾದ ಸಿಂಧ್ಯರವರು ಸದನದಿಂದ ಹೊರ ಹೋಗುತ್ತಿದ್ದಾರೆ. ಕೆಎಸ್‌ಆರ್‌ಟಿಸಿ ಸ್ಟ್ರೈಕ್ ಬಗ್ಗೆ ಒಂದು ಹೇಳಿಕೆಯನ್ನು ಅವರು ಕೊಡಬೇಕಾಗಿತ್ತು. Whether they have withdrawn the strike? It is learnt that High court has directed has Government to settle this matter immediately. ಎಕ್ಸಾಮಿನೇಷನ್‌ಗಳ ಬಗ್ಗೆಯೂ ಕೂಡ ಮಾನ್ಯ ಮಂತ್ರಿಗಳು ಹೇಳಿದ್ದರು. ಸಾಯಂಕಾಲದವರೆಗಿನ ವಾತಾವರಣವನ್ನು ತಿಳಿದುಕೊಂಡು, ಸಂಬಂಧಪಟ್ಟವರಿಂದ ರಿಪೋರ್ಟ್‌ನ್ನು ತರಿಸಿಕೊಂಡು ನಾನು ಹೇಳುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದರು. ಆದ್ದರಿಂದ ನಿಮ್ಮ ತೀರ್ಮಾನ ಜನರಿಗೆ ಗೊತ್ತಾಗಬೇಕಲ್ಲವೇ? ಸ್ಟ್ರೈಕ್ ವಿಥ್‌ಡ್ರಾ ಆಗಿದೆಯೇ ಇಲ್ಲವೇ ಎಂಬುದು ಜನರಿಗೆ ತಿಳಿಯಬೇಕು. ನಾಳೆ ಮಕ್ಕಳು ಪರೀಕ್ಷೆಗಳಿಗೆ ಹೋಗಬೇಕು. ಅಂತೆಯೇ ಲೇಬರರ್ಸ್, ಸರಕಾರಿ ನೌಕರರು ಮುಂತಾಗಿ ಎಲ್ಲರೂ ತಮ್ಮ ತಮ್ಮ ಕೆಲಸಗಳಿಗೆ ಹೋಗಬೇಕು. ಏನಾಗಿದೆ ಎಂಬುದನ್ನು ತಾವುಗಳು ಹೇಳಿದರೆ, ಅವರಿಗೆ ತಮ್ಮ ವ್ಯವಸ್ಥೆಗಳನ್ನು

ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಇಲ್ಲವಾದರೆ ಸ್ಟ್ರೈಕ್ ಇದೆ ಎಂದು ಅನೇಕರು ತಮ್ಮ ಕೆಲಸಗಳನ್ನು ಬಿಟ್ಟು ಕುಳಿತುಕೊಳ್ಳುವಂತಾಗಬಹುದು. ಏಕೆಂದರೆ ಈ ಮುಷ್ಕರವು ರಾಜ್ಯವ್ಯಾಪಿ ಹರಡುತ್ತಿರುವ ಮಾತುಗಳು ಕೂಡ ಕೇಳಿ ಬರುತ್ತಿದೆ. ಅದರ ಬಗ್ಗೆಯೂ ಕೂಡ ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಸಿಂಧ್ಯಾರವರು ಹೇಳಿಕೆ ನೀಡಬೇಕಾಗಿ ಅರಿಕೆ.

ಶ್ರೀ ವಾಟಾಳ್ ನಾಗರಾಜ್:- ಆ ಕಾರ್ಮಿಕ ಮುಖಂಡರುಗಳನ್ನು ಕರೆದು ಮಾತನಾಡುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಈಗ ಅವರನ್ನು ಕರೆದು ಮಾತನಾಡಲು ರಂಗಸಜ್ಜಿಕೆ ಆಗಿದೆಯೇ? ಆಗಿದ್ದರೆ ಆ ಮೂಲಕ ಒಂದು ಒಳ್ಳೆಯ ವಾತಾವರಣ ಸೃಷ್ಟಿಯಾಗಲಿ. ನಾವು ಅವರನ್ನು ಕರೆದುಕೊಂಡು ಬರಲು ಸಿದ್ದರಿದ್ದೇವೆ. ಒಟ್ಟಿನಲ್ಲಿ ಸಮಸ್ಯೆಯು ಬಗೆಹರಿಯಬೇಕು.

ಉಪಾಧ್ಯಕ್ಷರು:- ಈಗ ರಾಜಣ್ಣನವರು ಮಾತನಾಡಲಿ. ಅನಂತರ ಸಚಿವರು ಹೇಳಿಕೆ ಕೊಡುತ್ತಾರೆಯ

ಶ್ರೀ ಎನ್. ರಾಜಣ್ಣ:- ಕರ್ನಾಟಕ ರಾಜ್ಯದಲ್ಲಿ ಹತ್ತು ಲಕ್ಷಕ್ಕಿಂತಲೂ ಹೆಚ್ಚು ಜನರು ವಿದ್ಯಾವಂತ ನಿರುದ್ಯೋಗಿಗಳಾಗಿದ್ದಾರೆ. ಆಲ್ ಇಂಡಿಯಾ ಲೆವೆಲ್‌ನಲ್ಲಿ 70 ಲಕ್ಷ ಜನ ವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆ. ಇವೊತ್ತು ಎಸ್‌ಎಸ್‌ಎಲ್‌ಸಿ ಫೇಲ್ ಆಗಿಬಿಟ್ಟರೆ, ಕೂಲಿ ಕೆಲಸಕ್ಕೆ ಹೋಗುತ್ತಾನೆ. ಎಂಎ ಬಿಎ, ಮಾಡಿದವರು ಕೆಲಸವಿಲ್ಲದೆ ಚಿಂತಿತರಾಗಿದ್ದಾರೆ ರಸ್ತೆಯಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದ ವರೆಗೆ ಸುತ್ತಿಕೊಂಡು ಬಂದು ಮನೆಯಲ್ಲಿ ಮಲಗಿಕೊಳ್ಳುವುದು. ತನಗೆ ಇನ್ನೂ ಕೆಲಸ ಸಿಗಲಿಲ್ಲವಲ್ಲಾ ಎಂದು ದುಃಖದಲ್ಲಿದ್ದಾನೆ. ಅಂಥವರ ಸಮಸ್ಯೆಗಳಿಗೆ ಪರಿಹಾರವನ್ನು ನಮ್ಮ ಸರಕಾರದವರು ಹೇಗೆ ಕಂಡುಹಿಡಿದಿದ್ದಾರೆ ಎಂಬುದನ್ನು ಹೇಳಬಯಸುತ್ತೇನೆ. ಒಬ್ಬ ನಿರುದ್ಯೋಗಿ ಕಷ್ಟಪಟ್ಟು ಕೂಲಿ ಕೆಲಸ ಮಾಡಿ ದುಡಿದು ಬಂದವರನು ಸಾಯಂಕಾಲ ಒಂದಿಷ್ಟು ಸಾರಾಯಿ ಕುಡಿದು ಮಲಗಿ ಬಿಡುತ್ತಾನೆ. ವಿದ್ಯಾವಂತ ನಿರುದ್ಯಾಗಿಗಳು ಕೆಲಸಕ್ಕಾಗಿ ಸುತ್ತಿ ಸುತ್ತಿ ನಿದ್ದೆ ಬಾರದೆ ಡ್ರಗ್ಸ್ ಹಾಕಿಕೊಂಡು ಮಲಗುತ್ತಾನೆ. ಇಂಥವರ ಬಗ್ಗೆ ಚಿಂತನೆ ಮಾಡಬೇಕು. ಪ್ಯಾರಾ ನಂಬರ್-4ರಲ್ಲಿ ರಾಜ್ಯದಲ್ಲಿ 5,700 ಜನರಿಗೆ ಕೆಲಸ ಕೊಡುತ್ತೇವೆಂದು ಹೇಳಿದ್ದಾರೆ. ಇದನ್ನು ನೋಡುವಾಗ ನಮ್ಮ ಮುಖ್ಯಮಂತ್ರಿಯವರು ಆಗಾಗ ಏತಕ್ಕಾಗಿ ಡೆಲ್ಲಿಗೆ ಹೋಗುತ್ತಿರುತ್ತಾರೆ ಎಂಬುದನ್ನು ಯೋಚನೆ ಮಾಡಬೇಕು. ಅದು ಭದ್ರಾವತಿಯ ಸ್ಟೀಲ್ ಕಾರ್ಖಾನೆಗಾಗಿ. ಸರ್.ಎಂ. ವಿಶ್ವೇಶ್ವರಯ್ಯನವರು ಶ್ರಮ ಪಟ್ಟು ಪ್ರಾರಂಭ ಮಾಡಿದ ಈ ಕಾರ್ಖಾನೆಯು ಒಂದು ಕಾಲದಲ್ಲಿ ಕನ್ನಡಿಗರ ಹೆಮ್ಮೆಯ ಕಾರ್ಖಾನೆಯಾಗಿತ್ತು. ಹಲವಾರು ಕಾರಣಗಳಿಂದಾಗಿ ಅದು ನಷ್ಟಕ್ಕೊಳಗಾಗಿ ಕಾರ್ಖಾನೆಯನ್ನು ಮುಚ್ಚುವ ಸ್ಥಿತಿಗೆ ಬಂತು. ಅಲ್ಲಿನ ನೌಕರರು ಕೆಲಸವನ್ನು ಕಳೆದುಕೊಂಡು ಬೀದಿಪಾಲಾಗುವ ಪರಿಸ್ಥಿತಿ ಬಂದಾಗ ಅಂದಿನ ಪ್ರಧಾನಮಂತ್ರಿ ದೇವೇಗೌಡರು ಇದರ ಬಗ್ಗೆ ಜಾಗ್ರತೆ ವಹಿಸಿ ಇದನ್ನು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದವರಿಗೆ ವಹಿಸಿ, ಸುಮಾರು 600 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವ ಮೂಲಕ ಕಾರ್ಖಾನೆಯನ್ನು

ಪುನರುಜ್ಜೀವಗೊಳಿಸಿ ಕಾರ್ಮಿಕರು ಬೀದಿ ಪಾಲಾಗುವುದನ್ನು ತಪ್ಪಿಸಿದರು. ಇವತ್ತು ಆ ಕಾರ್ಖಾನೆಯಲ್ಲಿ 10 ಸಾವಿರ ಕಾರ್ಮಿಕರು ಇರಬಹುದು. ಇವತ್ತು ಆ ಕಾರ್ಖಾನೆಗೆ ಸಂಬಂಧಪಟ್ಟ ಆ್ಯನ್‌ಸಿಲರೀಸ್ ಇನ್ನೊಂದು ಹತ್ತು ಸಾವಿರ ಕುಟುಂಬಗಳು ಆಗಬಹುದು. ಅಂದರೆ ಒಟ್ಟು 20 ಸಾವಿರ ಕುಟುಂಬಗಳು. ಈ ಇಪ್ಪತ್ತು ಸಾವಿರ ಕುಟುಂಬಗಳಲ್ಲಿ ತಲಾ ಐದು ಜನರು ಅಂದರೆ ಒಟ್ಟು ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ಇವತ್ತು ಊಟ ಇಲ್ಲದ ಹಾಗೆ ಆಗುತ್ತಾ ಇತ್ತು. ಆದರೆ 600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ರಿ-ಹ್ಯಾಬಿಲೇಟ್ ಮಾಡಿದ ಕಾರಣದಿಂದ ಕಾರ್ಮಿಕರು, ಆ್ಯನ್ಸಿ ಫ್ಯಾಕ್ಟರಿಗಳು, ಇಷ್ಟೇ ಅಲ್ಲದೆ ಭದ್ರಾವತಿ ಮತ್ತು ಶಿವಮೊಗ್ಗಗಳಲ್ಲಿನ ವ್ಯಾಪಾರಸ್ತರೂ ಕೂಡ ತಮ್ಮ ವ್ಯಾಪಾರದೊಂದಿಗೆ ಒಂದು ಸ್ಥಿತಿಯಲ್ಲಿದ್ದಾರೆ. ಏಕೆಂದರೆ ಇಷ್ಟು ಜನ ಕಾರ್ಮಿಕರಿಗೆ ಸಂಬಳ ಬಂದರೆ ಅವರು ವ್ಯಾಪಾರ ಮಾಡುತ್ತಾರೆ. ಇಲ್ಲವಾದರೆ ಎಲ್ಲಿಂದ ವ್ಯಾಪಾರ ಮಾಡಲು ಸಾಧ್ಯವಾಗುತ್ತದೆ? ಅಂತೆಯೇ ಟಿಐನಲ್ಲಿ ಕೂಡ 1995-96 ರ ಹಿಂದೆ, 21 ಸಾವಿರಗಳಷ್ಟು ಕಾರ್ಮಿಕರು ಅಲ್ಲಿದ್ದರು. ಅವರಲ್ಲಿ 11-12 ಸಾವಿರ ಕಾರ್ಮಿಕರನ್ನು ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ಮನೆಗೆ ಕಳುಹಿಸಿದರು. ಹೀಗಾಗಿ ಎಷ್ಟೋ ಜನ ಐಟಿಐ ಮತ್ತು ಬಿಎಂಎಲ್ ನೌಕರರು ಕೆಲಸ ಬಿಟ್ಟು ಕಬ್ಬನ್‌ಪಾರ್ಕ್‌ನಲ್ಲಿ ಕಡಲೇಕಾಯಿ ಮಾರುತ್ತಾ ಇದ್ದಾರೆ. What Mr.H.D. Devegowda and Mr. J.H. Patel have done in three years, we will show.

ಹೀಗೆ ಅವರೆಲ್ಲರೂ ಬೀದಿಪಾಲಾಗಿದ್ದಾರೆ. ಅವರಿಗೆ ಕೊಡತಕ್ಕಂಥ 54 ಕೋಟಿ ರೂಪಾಯಿಗಳ ಬಾಕಿಯನ್ನು ಕೊಡಲಿಲ್ಲ. ಈ 54 ಕೋಟಿ ರೂ.ಗಳನ್ನು ಯಾವಾಗ ಕ್ಲಿಯರ್ ಮಾಡಿದರು ಅಂದರೆ, ದೇವೇಗೌಡರು ಪ್ರಧಾನಿಗಳಾದ ಮೇಲೆ, ರಾಜ್ಯದ ಎಂಪಿಗಳು ಒತ್ತಾಯ ಮಾಡಿದ ಮೇಲೆ, ನಮ್ಮ ಮುಖ್ಯಮಂತ್ರಿಯವರು ಇಲ್ಲಿಂದ ಫೈಲ್ ಎತ್ತಿಕೊಂಡು ಹೋದ ಮೇಲೆ ಜನತಾದಳ ಸರಕಾರದವರು ಮಾಡಿದರು. The United front Government has cleared crores of Rupees to its employees. ಹೀಗೆ ಉಳಿದಂತಹ 9000 ಎಂಪ್ಲಾಯೀಸ್‌ಗೆ 1,400 ಕೋಟಿ ರೂ.ಗಳ ಆರ್ಡರ್‌ನ್ನು ಈಗಾಗಲೇ ಕೊಟ್ಟು ಆಗಿದೆ. ಇನ್ನು ಮುಂದೆ ಸ್ವಯಂ ನಿವೃತ್ತಿ ಕೊಟ್ಟು ಯಾರನ್ನೂ ಮನೆಗೆ ಕಳುಹಿಸುವ ಹಾಗಿಲ್ಲ. Is it not an achievement? ಬಿ.ಎಂ.ಎಲ್. ಫ್ಯಾಕ್ಟರಿ ಬಗ್ಗೆ ಬಗ್ಗೆ ಹೇಳಬೇಕು ಎಂದರೆ, ಈ ಬಿ.ಎಂ.ಎಲ್. ಫ್ಯಾಕ್ಟರಿ ರೈಲ್ವೆ ಬೋಗೀಸ್ ಮಾಡುವಂತದ್ದು. ಆ ಬೋಗೀಸ್ ಕೆಲಸವನ್ನು ಖಾಸಗಿಯವರಿಗೆ ಕೊಟ್ಟಿದ್ದರು, ಅಲ್ಲಿರುವಂತಹ 6-7 ಸಾವಿರ ಎಂಪ್ಲಾಯೀಸ್‌ನ ಮನೆಗೆ ಕಳುಹಿಸಿದ್ದರು. ಆದರೆ ಈಗ ಉಳಿದಿರುವಂತಹ 8 ಸಾವಿರ ಜನ ಎಂಪ್ಲಾಯೀಸ್‌ಗೆ ವರ್ಷಕ್ಕೆ 300 ಬೋಗೀಸ್ ಮಾಡುವುದಕ್ಕೆ ಆರ್ಡರ್ಸ್ ಕೊಟ್ಟಿದ್ದಾರೆ. ಇದು ಜನತಾ ದಳದ ಎಂ.ಪಿ.ಗಳು, ಸನ್ಮಾನ್ಯ ಶ್ರೀ ದೇವೇಗೌಡರು ಮತ್ತು ಜೆ.ಹೆಚ್. ಪಟೇಲರ ಸರ್ಕಾರ ಮಾಡಿದ್ದು ಸಾಧನೆ ಅಲ್ಲವೇ? ಅದೇ ರೀತಿ ಹೆಚ್‌ಎಂಟಿ ವಾಚ್ ಫ್ಯಾಕ್ಟರಿ ಸಹ ಆಗಿತ್ತು. ಅದರಲ್ಲಿ 7,000 ಜನರನ್ನು ಹತ್ತು ವರ್ಷಗಳ ಹಿಂದೆ ಮನೆಗೆ

ಕಳುಹಿಸಿದ್ದರು. ಆದರೆ ಇವತ್ತಿನ ದಿವಸ ಅವರಿಗೆ ಪ್ರೊಡಕ್ಷನ್ ಕೊಡುವಷ್ಟು ಕೊಟ್ಟಿದ್ದಾರೆ. ಆದೇ ರೀತಿ ಕರ್ನಾಟಕ ಟೆಲಿಕಾಂ ಲಿಮಿಟೆಡ್ ಎಂಬುದು ಒಂದು ಸಣ್ಣ ಕಂಪನಿ. ಇದೂ ಸಹ ಮುಚ್ಚುವಂತಹ ಪರಿಸ್ಥಿತಿಗೆ ಬಂದಿತ್ತು, ಆದರೆ ನಮ್ಮ ಸನ್ಮಾನ್ಯ ಶ್ರೀ ದೇವೇಗೌಡರು ಇದರ ಎಲ್ಲಾ ಕಡತಗಳನ್ನು ದೆಹಲಿಗೆ ತೆಗೆದುಕೊಂಡು ಹೋಗಿ, ಈ ಕಂಪನಿಗೆ 24 ಕೊಟಿ ರೂಪಾಯಿಗಳ ಆರ್ಡರ್ಸ್ ತಂದಿದ್ದಾರೆ. ಇವತ್ತಿನ ದಿವಸ ಆ ಕಾರ್ಖಾನೆಯಲ್ಲಿ ಕೆಲಸ ನಡೆಯುವಂತಹ ಪರಿಸ್ಥಿತಿಗೆ ತಂದಿದ್ದಾರೆ. ಇದು ಅವರು ಮಾಡಿದಂತಹ ಸಾಧನೆ ಅಲ್ಲವೇ? ಯಾವ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಕೆಲಸವಿರುತ್ತದೆ, ತೆಗೆದುಕೊಂಡು ಜೇಬಿನ ತುಂಬಾ ಹಣ ಬರುತ್ತದೆ, ಆ ಹಣವನ್ನು ಅವನು ಮಾರ್ಕೆಟಿಗೆ ತೆಗೆದುಕೊಂಡು ಹೋದರೆ ಬ್ಯಾಗಿನ ತುಂಬಾ ಮನೆಗೆ ಸಾಮಾನುಗಳನ್ನು ತೆಗೆದುಕೊಂಡು ಬರುತ್ತಾನೆ ದಟ್ ಇಸ್ ಕಾಲ್ಡ್ ಜನತಾ ದಳ ಗೌರ್ನಮೆಂಟ್. ಕರ್ನಾಟಕ ಟೆಲಿಕಾಂ ಡಿಪಾರ್ಟ್‌ಮೆಂಟ್ ಮುಚ್ಚಿದ್ದರು, ಅಲ್ಲಿದಂತಹ ಕಾರ್ಮಿಕರು ಊಟ ಇಲ್ಲದೆ ಹೊಟ್ಟೆ ಮೇಲೆ ಬಟ್ಟೆ ಹಾಕಿಕೊಂಡು ಮಲಗುತ್ತಿದ್ದರು. ಅಂತಹ ಸಮಯದಲ್ಲಿ 24 ಕೋಟಿ ರೂ. ಆರ್ಡರ್ಸ್ ಕೊಟ್ಟಿದ್ದಾರೆ. ಆ ಆರ್ಡರ್ಸ್ ಬೇರೆಯವರಿಗೆ ಕೊಟ್ಟಿದ್ದರು. ಇದನ್ನೆಲ್ಲಾ ಯಾರು ಮಾಡಿದರು? ಇದರಲ್ಲಿ ನಿಜವಾಗಿ ಮುತುವರ್ಜಿ ವಹಿಸಿ ಬೆಂಗಳೂರು ನಾರ್ತ್ ಎಂ.ಪಿ. ಆದಂತಹ ಸನ್ಮಾನ್ಯ ಶ್ರೀ ದೇವೇಗೌಡರು, ಮತ್ತು ಜೆ.ಹೆಚ್. ಪಟೇಲರು ಕೆಲಸ ಮಾಡಿದ್ದಾರೆ. ರಾಜ್ಯದ ವಿಷಯಕ್ಕೆ ಬರುತ್ತೇನೆ, ಇಂಡಸ್ಟ್ರೀಸ್ ಇದ್ದರೆ ರೈತ ಉಳಿಯುವುದು ರೈತ ಉಳಿಯಬೇಕಾದರೆ ಕಾರ್ಖಾನೆಯಲ್ಲಿ ಇರುವಂತಹ ಕಾರ್ಮಿಕರಿಗೆ ಕೆಲಸ ಇರಬೇಕು. ಅವನಿಗೆ ಜೇಬಿನ ತುಂಬಾ ಹಣ ಬಂದರೆ ಮಾರ್ಕೆಟ್‌ಗೆ ಹೋಗುತ್ತಾನೆ, ಇನ್ನೊಂದು ಕಡೆ ಆಟೋದಲ್ಲಿ ಹೋಗುತ್ತಾನೆ, ಇನ್ನೊಂದು ಕಡೆ ಜೀಪಿನಲ್ಲಿ ಹೋಗುತ್ತಾನೆ, ಕಾರ್‌ನಲ್ಲಿ ಹೋಗುತ್ತಾನೆ, ಅವನಿಗೆ ಹಣವೇ ಬರಲಿಲ್ಲ ಎಂದರೆ, ಇಷ್ಟೆಲ್ಲಾ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ದಟ್ ಇಸ್ ಕಲ್ಡ್ ಗಾಂಧಿಯೆನ್ ಇಕಾನಮಿ. ಆದಕಾರಣ ನಮ್ಮ ಇಕಾನಮಿಯನ್ನು ಗಾಂಧಿಯೆನ್ ಇಕಾನಮಿ ಎಂದು ಹೇಳುವುದು. ಹಾಗೆಯೇ ನಮ್ಮ ಕರ್ನಾಟಕ ಸೋಪ್ ಅಂಡ್ ಡಿಟರ್‌ಜೆಂಟ್ ಫ್ಯಾಕ್ಟರಿ ಬಗ್ಗೆ ಹೇಳಬೇಕು ಎಂದರೆ, ಇದರ ಬಗ್ಗೆ ಮಾನ್ಯ ಶ್ರೀ ಸುರೇಶ್ ಕುಮಾರ್ ಅವರಿಗೆ ಚೆನ್ನಾಗಿ ಗೊತ್ತಿದೆ. We both of is are leaders there

ಸೋಪ್ ಅಂಡ್ ಡಿಟರ್‌ಜೆಂಟ್ ಫ್ಯಾಕ್ಟರಿ ಅದೃಷ್ಟಕ್ಕೆ ಮೂರು ವರ್ಷದಿಂದ ಲಾಭದಲ್ಲಿ ಇದೆ. ಅಂದರೆ, ಮೂರು ವರ್ಷದಿಂದ ಈಚೆಗೆ ಸುಮಾರು 14 ಕೋಟಿ ರೂಪಾಯಿ ಲಾಭದಲ್ಲಿ ಇದೆ. ಇದಕ್ಕೆ ಮೊದಲು ಅಂದರೆ, 1981ರಲ್ಲಿ ಸುಮಾರು 18 ಕೋಟಿ ರೂಪಾಯಿ ಸಾಲ ಮಾಡಿ ಅದಕ್ಕೆ ಬಡ್ಡಿ, ಬಡ್ಡಿ ಸೇರಿಸಿ ಸುಮಾರು 90 ಕೋಟಿ ರೂಪಾಯಿಯಷ್ಟು ಸಾಲ ಮಾಡಿ ಇಟ್ಟಿದ್ದರು. ಆ ಕಾರ್ಖಾನೆಯನ್ನು ಮುಚ್ಚುವಂತಹ ಪರಿಸ್ಥಿತಿಗೆ ತಂದಿದ್ದರು. We must be thankful to the sincer officers there. 3-4 ಆಫೀಸರ್ಸ್ ಎಫರ್ಟ್ ತೆಗೆದುಕೊಂಡು, ಕಾರ್ಮಿಕರು ಒಳ್ಳೆಯ ಕೆಲಸ ಮಾಡಿದ್ದಕ್ಕೆ ಇವತ್ತು ಸುಮಾರು 14 ಕೋಟಿ ರೂಪಾಯಿಗಳಷ್ಟು ಲಾಭದಲ್ಲಿ ಇದೆ ಸಾಲ

90 ಕೋಟಿ ರೂಪಾಯಿಗಳಷ್ಟು ಇದ್ದಿದ್ದನ್ನು 40 ಕೋಟಿ ರೂಪಾಯಿಗಳಿಗೆ ತಂದಿದ್ದಾರೆ. ಇದು ನಮ್ಮ ಸರ್ಕಾರ ಮಾಡಿದಂತಹ ಒಳ್ಳೆಯ ಕೆಲಸ ಅಲ್ಲವೆ? 15 ವರ್ಷದಿಂದ ನಷ್ಟದಲ್ಲಿ ಇದ್ದಂತಹ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಕಾರ್ಖಾನೆಯನ್ನು ಜನತಾ ದಳ ಸರ್ಕಾರ ಮಾಡಿದಂತಹ ಸಾಧನೆ ಅಲ್ಲವೆ? ನಾನು ಇನ್ನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಕೆ.ಎಂ.ಎಫ್.ಬಗ್ಗೆ ಹೇಳುವುದಾದರೆ, ಹೆಚ್ಚಾಗಿ ಐಸ್ ಕ್ರೀಂ ತಿನ್ನುವುದು ಅಂದರೆ ಮಕ್ಕಳು. ನಮ್ಮ ಸೀನಿಯರ್ ಲೀಡರ್ ಸನ್ಮಾನ್ಯ ವಾಟಾಳ್ ನಾಗರಾಜ್ ಅವರಿಗೂ ತಿಳಿದಿದೆ, ಬ್ರಿಗೇಡ್ ರೋಡಿಗೆ ಹೋದರೆ ಕ್ವಾಲಿಟಿ ಐಸ್ ಕ್ರೀಂ ಜಾಯ್ ಐಸ್ ಕ್ರೀಂ, ವಾಡಿಲಾಲ್ ಐಸ್ಕ್ರೀಂ, ಸಬ್‌ಜೀರೋ ಐಸ್ ಕ್ರೀಂ ಇವರೆಲ್ಲಾ ಐಸ್ ಕ್ರೀಂ ಮಾಡಿ ಇಲ್ಲಿ ಹಣ ಸಂಪಾದನೆ ಮಾಡುತ್ತಾರೆ. ಆದರೆ ಸರ್ಕಾರದ ನ್ಯಾಷನಲ್ ಡೆವಲ್ಪಮೆಂಟ್ ಬೋರ್ಡ್‌ಗೆ ಗೌರ್‍ನಮೆಂಟ್ ಆಫ್ ಇಂಡೀಯಾ ಐಸ್ ಕ್ರೀಂ ಫ್ಯಾಕ್ಟರಿ ಪ್ರಾರಂಭ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿರಲಿಲ್ಲ. ಆದರೆ ನಮ್ಮ ಸನ್ಮಾನ್ಯ ಶ್ರೀ ದೇವೇಗೌಡರು ಹೋದ ಮೇಲೆ ಥ್ರೊ ಔಟ್ ಇಂಡಿಯಾ ಎನ್‌ಡಿಡಿಬಿ ಗೆ ಅಮೂಲ್ ಐಸ್ ಕ್ರೀಂ ಪ್ರೊಡ್ಯೂಸ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ಇದರಲ್ಲಿ ಕರ್ನಾಟಕದಲ್ಲಿ ಕನಿಷ್ಠ ಒಂದು ದಿವಸಕ್ಕೆ 10 ಸಾವಿರ ಲೀಟರ್ ಹಾಲು ಐಸ್ ಕ್ರೀಂ ಫ್ಯಾಕ್ಟರಿಗೆ ಕನ್‌ಸ್ಯೂಮ್ ಆದರೆ, ಇದರಿಂದ ಎರಡು ಸಾವಿರ ರೈತರಿಗೆ ಅನುಕೂಲವಾಗುತ್ತದೆ. ಇದು ಸಾಧನೆ ಮಾಡಿದಂತೆ ಅಲ್ಲವೇ? 10 ಸಾವಿರ ಲೀಟರ್ ಹಾಲನ್ನು ಶೇಖರಿಸಬೇಕಾದರೆ, ರೈತ ಮೂರು ಸಾವಿರ ಹಸು ಕಟ್ಟಿಕೊಂಡು ಹಾಲು ಕೊಟ್ಟು, ಮೂರು ಸಾವಿರ ಹಸು ಹತ್ತು ತಪ್ಪೆ ಸಗಣಿ ಹಾಕಿದರೆ 30 ಸಾವಿರ ಕೆ.ಜಿ. ಕೊಟ್ಟಿಗೆ ಗೊಬ್ಬರ ಸಿಗುತ್ತದೆ. ಗೊಬ್ಬರದ ಬೆಲೆ 2ರೂ 30,000 2ರೂ ದಿವಸಕ್ಕೆ 60,000 ರೂಗಳು ದಿಸ್ ಇಸ್ ಕಾಲ್ಡ್ ಗಾಂಧಿಯೆನ್ ಇಕಾನಮಿ. ಸಗಣಿಯನ್ನು ಗೊಬ್ಬರದ ಜೊತೆ ಹೋಲಿಸಿ ನೋಡಿದರೆ, ಇವತ್ತು ಗೊಬ್ಬರದ ಬೆಲೆ ಕೆ.ಜಿ 10 ರೂಪಾಯಿ ಇದೆ. ಇದನ್ನೆಲ್ಲಾ ಲೆಕ್ಕ ಹಾಕಿದರೆ ರೈತನಿಗೆ ಹೇಗೆ ಅನುಕೂಲ ಆಗುತ್ತದೆ ಎಂಬುದನ್ನು ನಾವು ಚಿಂತನೆ ಮಾಡಬೇಕು. ಕೆಎಂಎಫ್ ಅಮೂಲ್ ಐಸ್ ಕ್ರೀಂ ಬಂದ ಮೇಲೆ ಪ್ರೈವೇಟ್ ಅವರೆಲ್ಲಾ ಒಂದು ರೂಪಾಯಿ, ಎರಡು ರೂಪಾಯಿ ಐಸ್ ಕ್ರೀಂ ಬೆಲೆಯನ್ನು ಕಡಿಮೆ ಮಾಡಿಬಿಟ್ಟರು. ಇವತ್ತಿನ ದಿವಸ ಬಡವ ಕೂಡ ಐಸ್ ಕ್ರೀಂ ತಿನ್ನುವಂತೆ ಆಯಿತು ಮತ್ತು ಅವನಿಗೂ ಸಹ ಸಿಗುತ್ತಿದೆ. Dr. Kurian is a steel man of the Milk Authority of India.ಇದೆ ಮಾದರಿಯಲ್ಲಿ ಎಷ್ಟೋ ಕೆಲಸ ಮಾಡಿದ್ದೇವೆ. 1995ರಲ್ಲಿ ನಮ್ಮ ಸರ್ಕಾರ ಬಂದ ಕೂಡಲೇ ಮಾಡಿದಂತಹ ಕೆಲಸವೇನೆಂದರೆ, ಆಹಾರ ಸಚಿವರು ಇಲ್ಲಿ ಇಲ್ಲ, ಮೊದಲು ಮಾಡಿದ ಕೆಲಸವೇನೆಂದರೆ, ಜನತಾ ದಳ ಸರ್ಕಾರ 1989ರಲ್ಲಿ ಇರುವಾಗ ಮೂರು ರೂಪಾಯಿಗೆ ಹಸಿರು ಕಾರ್ಡಿಗೆ ಅಕ್ಕಿ ಕೊಡುತ್ತಿದ್ದರು ನಾವು ಹೋದ ಮೇಲೆ ಕಾಂಗ್ರೆಸ್ ಐ ಬಂದು ಇದೇ ಗ್ರೀನ್ ಕಾರ್ಡ್‌ಗೆ ಶ್ರೀಮತಿ ಇಂದಿರಾ ಗಾಂಧಿಯವರ ಫೋಟೊ ಹಾಕಿ 6.50 ರೂಪಾಯಿ ಮಾಡಿದರು. ಆದರೆ ಪುನಃ ನಮ್ಮ ಸರ್ಕಾರ ಬಂದ ಮೇಲೆ ಅದೇ ಗ್ರೀನ್ ಕಾರ್ಡ್‌ಗೆ ಗಾಂಧಿ ಫೋಟೋ ಹಾಕಿ 3.50 ರೂಪಾಯಿ ಮಾಡಿದೆವು. ಉದಾಹರಣೆ

ಕೊಡಬೇಕು ಅಂದರೆ ಇನ್ನೂ ಬಹಳವಿದೆ. ಇವತ್ತು ಬೆಳಿಗ್ಗೆ ಜಯಮಹಲ್ ರೋಡ್‌ನಲ್ಲಿ ಆಟೋರಿಕ್ಷಾ ಆಕ್ಸಿಡೆಂಟ್ ಆಯಿತು. ಆ ಡ್ರೈವರ್ ಕುಟುಂಬಕ್ಕೆ 50 ಸಾವಿರ ಸಿಗುವಂತಹ ವ್ಯವಸ್ಥೆ ಮಾಡಿದ್ದೇವೆ ವಿಧವೆಯವರಿಗೆ 100 ರೂಪಾಯಿ ಮಾಡಿದ್ದೇವೆ. ಲಾರಿ ಆಕ್ಸಿಡೆಂಟ್ ಆದರೆ 50 ಸಾವಿರ ರೂಪಾಯಿ. ನಿನ್ನೆ ತಾನೆ ಜಿ.ಒ. ಆಗಿದೆ. ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ What Mr. Goveindegowda has done to our state and what Mr. Bommai has done to our state is important.14 ವರ್ಷ ಮಕ್ಕಳಿಗೆ ಶಿಕ್ಷಣವನ್ನು ಫಂಡಮೆಂಟಲಿ ರೈಟ್ಸ್ ಆಗಿ ಮಾಡುವ, ಕೇಂದ್ರ ಸರ್ಕಾರದ ಯೋಜನೆಯನ್ನು ರಾಜ್ಯ ಸರ್ಕಾರ ಅನುಮೋದಿಸಿದೆ. ಈ ವರ್ಷದಲ್ಲಿ 1,469 ಸರ್ಕಾರಿ ಪ್ರೈಮರಿ ಶಾಲೆಗಳನ್ನು ಸ್ಥಾಪಿಸಲಾಗಿದೆ 8,00 ಶಾಲಾ ಕೊಠಡಿ ಕಟ್ಟುವುದಕ್ಕೆ 42 ಕೋಟಿ ರೂ. ಅನುದಾನ ನೀಡಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಶ್ರೀ ರಾಜಣ್ಣನವರು ಹಿಂದೆ ನಿಂತಿದ್ದಾರೆ, ನೋಡಿ ಬಹಳ ಸ್ಟ್ರಾಂಗ್ ಸಪೋರ್ಟ್ ಮಾಡುತ್ತಿದ್ದಾರೆ. ಸನ್ಮಾನ್ಯ ಶ್ರೀ ದೇವೇಗೌಡರು ಮೆಸೆಂಜರ್ ಬಂದ ಹಾಗೆ ಬಂದಿದ್ದಾರೆ ಎಂದು ತಿಳಿದು ಎಲ್ಲರೂ ಕೂಡ ಬಹಳ ಕಾತುರದಿಂದ ನೋಡಿ ಅವರಿಗೆ ಸಪೋರ್ಟ್ ಮಾಡುವುದಕ್ಕೆ ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಈ ಆಯವ್ಯಯ ಸಭೆ ಮುಗಿದ ನಂತರ ಈ ಮಂತ್ರಿ ಮಂಡಲ ವಿಸ್ತರಣೆಯಲ್ಲಿ ಹೆಚ್ಚು ಕಡಿಮೆ ನಮ್ಮ ರಾಜಣ್ಣನವರಿಗೆ ಸ್ಥಾನ ಸಿಗಬಹುದು ಎಂದು ತಿಳಿದುಕೊಂಡಿದ್ದೇವೆ.

ಶ್ರೀ ಹೆಚ್.ಡಿ ಬಸವರಾಜ್:- ಸಪೋರ್ಟ್ ಏಕೆ ಕೊಡುತ್ತಿದ್ದಾರೆ ಎಂದರೆ, ಸಗಣಿ ಮತ್ತು ಅಮೂಲ್ ಐಸ್ ಕ್ರೀಂ ಈ ಎರಡರ ಬಗ್ಗೆ ವಿಶ್ಲೇಷಣೆ ಮಾಡುತ್ತಿರುವುದರಿಂದ ಈ ಸಪೋರ್ಟ್ ಅಗತ್ಯವಾಗಿ ಬೇಕಾಗಿದೆ.

ಶ್ರೀ ಆರ್. ಕೃಷ್ಣಪ್ಪ:- ಸನ್ಮಾನ್ಯ ವಾಟಾಳ್ ಅವರು ಮಾತನಾಡುವಾಗ ಕೋರಂ ಇರಲಿಲ್ಲ, ಆದರೆ ಈಗ ವೇಳೆ 6.40 ಆದರೂ ಸಹ ಎಷ್ಟೊ ಜನ ಭಾಷಣ ಕೇಳುವುದಕ್ಕೆ ಕುಳಿತಿದ್ದಾರೆ, ಇಂತಹ ಸಮಯದಲ್ಲಿ ಅವರನ್ನು ಕುಳಿತುಕೊಳ್ಳಿ ಅಂದರೆ ಯಾವ ನ್ಯಾಯ?

Sri N. RAJANNA:- sir, I am staunch follower of Gandhian philosophy. I studied in a cattle-shed. I am not a qualified man. I do not have experince. I will do something to my country. What Something I can do to my country is important.

ಉಪಾಧ್ಯಕ್ಷರು:- ರಾಜಣ್ಣನವರೇ ಬೇಗ ಮುಗಿಸಿ, ಟೈಂ ಬಹಳವಾಗಿದೆ.

ಶ್ರೀ ಎನ್. ರಾಜಣ್ಣ :- ಇದಕ್ಕೆ, ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಖಾತೆ ಸಚಿವರರಾದಂತಹ ಸನ್ಮಾನ್ಯ ಶ್ರೀ ಬೊಮ್ಮಾಯಿ ಅವರು 42 ಕೋಟಿ ರೂಪಾಯಿ ಅನುದಾನ

ನೀಡಿದ್ದಾರೆ. ನಮ್ಮ ಸನ್ಮಾನ್ಯ ಶ್ರೀ ಗೋವಿಂದೇಗೌಡರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರನ್ನು ನಾನು ಹೊಗಳುವುದಕ್ಕೆ ಇಷ್ಟ ಇಲ್ಲ. ಏಕೆಂದರೆ, ಅವರು ಗಾಂಧಿ ತತ್ವದಲ್ಲಿ ಹೋಗುತ್ತಿದ್ದಾರೆ. 1994-95ರಿಂದ ಇದುವರೆವಿಗೂ ಎಷ್ಟೋ ಸಾವಿರ ಉಪಾಧ್ಯಾಯರುಗಳ ಹುದ್ದೆಯನ್ನು ಭರ್ತಿ ಮಾಡಿದ್ದೇವೆ. We are going to fill up 73000 teachers post. ಇದರಲ್ಲಿ ಅರ್ಧ ಭಾಗ ಮೈನರ್ಸ್‌ಗೆ, ಇದರಲ್ಲಿ 50% rese rved purely for ladies.

ಶ್ರೀ ಎ. ರಾಜಣ್ಣ:- 35 ಸಾವಿರ ಮಹಿಳೆಯರಿಗೆ ಕಾದಿರಿಸಲಾಗಿದೆ. ಎಷ್ಟೋ ಹೆಂಗಸರು ಹಳ್ಳಿಗಳಲ್ಲಿ ಕೆಲಸ ಸಿಕ್ಕುತ್ತಲೇ ಮದುವೆ ಮಾಡಿಕೊಂಡುಬಿಟ್ಟರು.

ಶ್ರೀ ವಾಟಾಳ್ ನಾಗರಾಜ್:- ಈ ಕಲ್ಯಾಣದ್ದೆಲ್ಲಾ ಬೊಮ್ಮಾಯಿಯವರಿಗೆ, ಸಗಣಿದೆಲ್ಲಾ ದೇವೇಗೌಡರಿಗೆ ಮತ್ತು ಜೆಎಚ್ ಪಟೇಲರಿಗೆ ಹೋಗಬೇಕು.

ಶ್ರೀ ಡಿ.ಎಸ್ ಮಾದಪ್ಪ:- ರಾಜಣ್ಣ ಮಾತನಾಡುತ್ತಾ ಪ್ಯೂರ್‌ಲೇಡಿ ಅಂದರು, ಹೆಂಗಸರಲ್ಲಿ ಪ್ಯೂರ್‌ಲೇಡಿ ಎಂದು ಇದೆಯಾ?

ಶ್ರೀ ಎಸ್ ಕೃಷ್ಣಪ್ಪ:- ನಮ್ಮಲ್ಲಿ ಪ್ರಭಾವ ಇಲ್ಲದವರು ಆರ್ಥಿಕವಾಗಿ ಹಿಂದುಳಿದವರು ಶಿಕ್ಷಕರ ವೃತ್ತಿಗೆ ಹೋಗುತ್ತಾರೆ. ಪ್ಯೂರ್ ಲೇಡಿಸ್ ಎಂದು ರಾಜಣ್ಣ ಹೇಳಿದರೆ ಇವರು ಪ್ಯೂರ್ ಲೇಡಿ ಎಂದು ತಿಳಿಯಬಾರದು.

ಶ್ರೀ ಎನ್. ರಾಜಣ್ಣ:- ಗೆಳೆಯರೇ, ಈ ದೇಶದ 90 ತಾಯಂದಿರಿಗೆ ಹೆಣ್ಣುಮಗುವಾದ ತಕ್ಷಣ ಚಿಂತೆ ನನ್ನ ಮಗುವನ್ನು ಹೇಗೆ ಸಾಕುವುದು, ಅವಳನ್ನು ಹೇಗೆ ದೊಡ್ಡದು ಮಾಡುವುದು ವಿದ್ಯೆ ಕಲಿಸದಿದ್ದರೆ ಕೆಲಸ ಸಿಕ್ಕುತ್ತದೆಯೇ, ಕೆಲಸ ಸಿಕ್ಕಿದಿದ್ದರೆ ಅವಳಿಗೆ ಒಳ್ಳೆಯ ಗಂಡ ಸಿಕ್ಕುತ್ತಾನೆಯೇ ಎಂದು ಅಂಥಾದ್ದಲ್ಲಿ, ಬ್ರಹ್ಮಜ್ಞಾನದಿಂದ ನಾವು 35 ಸಾವಿರ ಹೆಣ್ಣುಮಕ್ಕಳಿಗೆ ಕೆಲಸ ಕೊಡುತ್ತಿದ್ದೇವೆ. Is it not an achievement by Janata Dal governbment. The credit goes to Sri J.H. Patel, Sri Govinda Gowda and Sri S.R. Bommai and to our governemtn automatically. ಇನ್ನು ಎಸ್‌ಸಿ/ ಎಸ್‌ಟಿ ಮೈನಾರಿಟಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಎಸ್‌ಸಿ/ಎಸ್‌ಟಿ ಹುಡುಗಿಯರಿಗೆ 100 ರೂಪಾಯಿಯಿಂದ 600 ರೂ ಮಾಡಿದ್ದೇವೆ. ಆ ಮಗು ಶಿಕ್ಷಣ ಪಡೆದು ಒಳ್ಳೆಯ ಕೆಲಸ ಬರಬೇಕು, ಒಳ್ಳೆಯ ಜೀವನ ನಡೆಸಬೇಕು ಎಂದು ಒಳ್ಳೆಯ ಕೆಲಸ ಮಾಡುತ್ತಿದ್ದೇವೆ. I want to impress this point the Hon'ble Ex. prime Minister Sri H.D. Devegowda released Rs. 80 crores for developmdnt of backward communities and Rs. 7 crores for minorities. ಇದು ಹಿಂದಿರುಗಿಸುವ ಮೊಬಲಗಲ್ಲ For the development of poor people Rs. 159 crores has been released by the centre to the Karnataka state.

ನೋಡಿ ಸ್ವಾಮಿ ಎಷ್ಟೊಂದು ಮಾಡಿದ್ದಾರೆ. ಮಾನ್ಯ ದೇವೇಗೌಡರು ಪ್ರಧಾನಿಗಳಾಗಿದ್ದಾಗ 1996-97ನೇ ಸಾಲಿನಲ್ಲಿ 12 ಕೋಟಿ ರೂಪಾಯಿಗಳನ್ನು ಮತ್ತು 1997-98ನೇ ಸಾಲಿನಲ್ಲಿ ಕೊಳ್ಳೇಗಾಲ ಅಭಿವೃದ್ಧಿಗೆ 16 ಕೋಟಿ ಕರ್ನಾಟಕಕ್ಕೆ ಬಂತು.

ಉಪಾಧ್ಯಕ್ಷರು:- ರಾಜಣ್ಣನವರೇ ಮುಕ್ತಾಯ ಮಾಡಿ.

ಶ್ರೀ ಎನ್. ರಾಜಣ್ಣ:- ಸಾರ್ ನನಗೆ ಒಂದು ಗಂಟೆ ಬೇಕು, ಸಂಕ್ಷಿಪ್ತವಾಗಿ ಹೇಳಬೇಕಾದರೆ, ಸರ್ಕಾರ ಬರುತ್ತದೆ ಹೋಗುತ್ತದೆ. ನಮ್ಮ ಸರ್ಕಾರ ಇವತ್ತು ಹೋಗಿಬಿಡುತ್ತದೆ ನಾಳೆ ಹೋಗಿಬಿಡುತ್ತದೆ ಎಂದೆಲ್ಲಾ ಹೇಳುತ್ತಾರೆ. ಈ ಸರ್ಕಾರ ಭದ್ರವಾಗಿರುತ್ತದೆ. ಇವತ್ತು ಸೋತವರು ನಾಳೆ ಗೆದ್ದು ಬರುತ್ತಾರೆ. ಇವತ್ತು ಗೆದ್ದವರು ನಾಳೆ ಸೊಲುತ್ತಾರೆ. ನಮ್ಮ ಸರ್ಕಾರ ಮೂರು ವರ್ಷದಲ್ಲಿ ಏನು ಒಳ್ಳೆಯ ಕೆಲಸ ಮಾಡಿದೆ. ನಮ್ಮ 16 ಎಂಪಿಗಳು ಏನು ಒಳ್ಳೆಯ ಕೆಲಸ ಮಾಡಿದ್ದಾರೆ, ದೇವೇಗೌಡರು ಏನು ಒಳ್ಳೆಯ ಕೆಲಸ ಮಾಡಿದ್ದಾರೆ ಎಂಬುದು ಗೊತ್ತಾಗಿದೆ ಕೊನೆಯಲ್ಲಿ ಒಂದು ಮಾತು ಹೇಳುತ್ತೇನೆ. ದೇವೇಗೌಡರು ಪ್ರಧಾನಿ ಇರುವಾಗ ದೇಶದ ಆರ್ಥಿಕ ಬೆಳವಣಿಗೆ ಬಗ್ಗೆ. ಒಂದು ಸ್ಕೀಂ ತಂದರು ಆದಾಯತೆರಿಗೆ ಸ್ವಯಂ ಘೋಷಣೆ ಎಂದು 10,050 ಕೋಟಿ ರೂ ಯಾವ ಜನರಿಗೂ ತೊಂದರೆ ಇಲ್ಲ ಕೇಂದ್ರಕ್ಕೆ ಅಷ್ಟು ದುಡ್ಡು ಬಂದಿದೆ ನಾಳೆ ಬಿಜೆಪಿ ಸರ್ಕಾರ ಬಂದರೆ ಈ 10,050 ಕೋಟಿ ರೂ ಖರ್ಚು ಮಾಡುವುದಕ್ಕೆ ಟ್ರಜರಿಯಲ್ಲಿದೆ ಎಂತಹ ಒಳ್ಳೆಯ ಕೆಲಸ ಮಾಡಿದ್ದಾರೆ. 4.60 lakhs people have been assessed to Income Tax and every year you can expect not less than Rs. 5000 crores from these assessees.

ಇಂಗ್ಲೀಷಿನಲ್ಲಿ ಒಂದು ಮಾತು ಹೇಳುತ್ತಾರೆ: Flesh without blood' ಯಾರಿಗೂ ತೊಂದರೆ ಇಲ್ಲ ಇಂತಹ ಒಳ್ಳೆಯ ಕೆಲಸ ಮಾಡಿದ್ದಾರೆ. ತಾವು ಸಹಕಾರ ಕೊಟ್ಟು ನಮ್ಮ ಸರ್ಕಾರಕ್ಕೆ ನಡೆಸಲು ಬಿಟ್ಟಿದ್ದರೆ 10 ಸಾವಿರ ಕೋಟಿಯೇನು 50 ಸಾವಿರ ಕೋಟಿಗೂ ಮೇಲೆ ಮಾಡಿ, ಕರ್ನಾಟಕಕ್ಕೆ ಒಳ್ಳೆಯದಾಗುತ್ತಿತ್ತು ಎಂದು ಹೇಳಿ, ನನಗೆ ಕಾಲಾವಕಾಶ ಕಡಿವಾಣ ಮಾಡಿದ್ದರಿಂದ ತಮಗೆ, ರಾಜ್ಯಪಾಲರ ಭಾಷಣಕ್ಕೂ,.ಪತ್ರಕರ್ತರು, ಅಧಿಕಾರಿಗಳು, ನನ್ನ ಗೆಳೆಯರು, ಹಿರಿಯ ನಾಯಕರುಗಳಿಗೆಲ್ಲಾ ವಂದನೆ ಮಾಡಿ ನನ್ನ ಮಾತು ಮುಗಿಸುತ್ತೇನೆ. ಜೈಹಿಂದ್, ಜೈ ಕರ್ನಾಟಕ.

ಉಪಾಧ್ಯಕ್ಷರು:- ಈಗ ಸದನವನ್ನು ಮುಂದುಡುತ್ತಿದ್ದೇನೆ. ಸದನವು ಸಂಜೆ ಮತ್ತೆ ನಾಳೆ ಬೆಳಿಗ್ಗೆ 11 ಘಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 50 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 17-3-1998 ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)